ಮೀನುಗಾರರ ಗ್ರಾಮ ಬೆಂಗರೆ

ಚಿಕ್ಕ ವೆಂಕಟೇಶಯ್ಯ

ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

57

ಮೀನುಗಾರರ ಗ್ರಾಮ ಬೆಂಗರೆ

ಚಿಕ್ಕವೆಂಕಟೇಶಯ್ಯ

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

MEENUGARARA GRAMA BENGERE
by Chikkavenkateshiah Published by the Prasaranga, Bangalore University, Bangalore
Pp. 32+viii

ಪ್ರಕಾಶಕರು :
ಹೆಚ್. ಆರ್. ದಾಸೇಗೌಡ
ನಿರ್ದೇಶಕ, ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560056

ಪ್ರಕಟಣ ಸಹಾಯಕ :
ಪುಂಡಲೀಕ ಹಾಲಂಬಿ

ಬೆಲೆ : **50** ಪೈಸೆ

ಮುದ್ರಣ :
ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ, ಬೆಂಗಳೂರು

ಮುನ್ನುಡಿ

ಜನಸಾಮಾನ್ಯರನ್ನು ನೇರವಾಗಿ ವಿಶ್ವವಿದ್ಯಾಲಯ ಗಳು ಮುಟ್ಟುವ ಪ್ರಯತ್ನದ ಫಲವೇ ಪ್ರಚಾರೋಪ ನ್ಯಾಸಗಳು. ವಿಶ್ವವಿದ್ಯಾಲಯಗಳು ಕೇವಲ ತಿಳುವಳಿ ಕೆಯ ಕೇಂದ್ರಗಳಾಗದೆ ತನ್ನ ಸುತ್ತಮುತ್ತಲಿನ ಜನತೆಯ ಶೈಕ್ಷಣಿಕ ಸಾಂಸ್ಕೃತಿಕ ಆಗುಹೋಗುಗಳಲ್ಲಿ ಸಹ ಸಕ್ರೀಯ ವಾಗಿ ಪಾಲ್ಗೊಳ್ಳುವುದು ಅವಶ್ಯಕ; ಸಾಮಾನ್ಯ ಜನತೆ ಯಲ್ಲಿ ಅರಿವಿನ ಸಿರಿಯನ್ನು ಹಂಚುವ ಹೊಣೆಯನ್ನು ಹೊತ್ತ ವಿಶ್ವವಿದ್ಯಾಲಯಗಳು ಜ್ಞಾನ ಪ್ರಸಾರದ ಕೇಂದ್ರಗಳಾಗಿ ನಿರ್ವಹಿಸುತ್ತಿರುವ ಕಾರ್ಯಗಳಲ್ಲಿ ಪ್ರಮುಖವಾದದ್ದು ಪ್ರಚಾರೋಪನ್ಯಾಸಗಳು. ಈ ಪ್ರಚಾರೋಪನ್ಯಾಸಗಳು ವಿಶ್ವವಿದ್ಯಾಲಯವನ್ನು ದಂತ ಗೋಪುರವಾಗದಂತೆ ತಡೆದು ಜನಸಾಮಾನ್ಯನ ಗುಡಿಸಲ ಬಾಗಿಲನ್ನು ತಟ್ಟುವಂತೆ ಮಾಡಿದೆ.

ಬೆಂಗಳೂರು ವಿಶ್ವವಿದ್ಯಾಲಯವು ಕಳೆದ ಐದಾರು ವರ್ಷದಿಂದ ನಗರದ ಹಾಗೂ ಗ್ರಾಮಾಂತರ ಪ್ರದೇಶದ ಕಾರ್ಖಾನೆಗಳಲ್ಲಿ, ಸಂಘ ಸಂಸ್ಥೆಗಳಲ್ಲಿ, ಕಾಲೇಜುಗಳಲ್ಲಿ ವಿವಿಧ ವಿಷಯಗಳನ್ನು ಕುರಿತು ಹಲವಾರು ವಿದ್ವಾಂಸ ರಿಂದ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸುತ್ತಾ ಬಂದಿದೆ. ಈ ಪ್ರಚಾರೋಪನ್ಯಾಸಗಳನ್ನು ಅತ್ಯಂತ ಕಡಿಮೆ ಬೆಲೆಯಲ್ಲಿ ಕಿರುಹೊತ್ತಿಗೆಗಳನ್ನಾಗಿ ಪ್ರಕಟಿಸ ಲಾಗುತ್ತಿದೆ. ಈ ಕಿರುಹೊತ್ತಿಗೆಗಳು ಜನಸಾಮಾನ್ಯ

ರಲ್ಲಿ ಹೆಚ್ಚು ಪ್ರಸಾರವಾಗಿ, ವಿಶ್ವವಿದ್ಯಾಲಯದ ಆಸೆ ಆಕಾಂಕ್ಷೆಗಳು ನೆರವೇರುವುದೆಂದು ಬಯಸುತ್ತೇನೆ.

ಶ್ರೀ ಚಿಕ್ಕವೆಂಕಟೇಶಯ್ಯ ಅವರ 'ಮೀನುಗಾರರ ಗ್ರಾಮ ಬೆಂಗರೆ' ಕೃತಿಯು ಈ ಮಾಲೆಯಲ್ಲಿ ಐವತ್ತೈದನೇ ಕೃತಿಯಾಗಿದೆ. ಈ ಕೃತಿಯನ್ನು ಬರೆದುಕೊಟ್ಟು ಪ್ರಕಟಿಸಲು ಅನುಮತಿ ನೀಡಿರುವ ಶ್ರೀ ಚಿಕ್ಕವೆಂಕಟೇಶಯ್ಯ ಅವರಿಗೆ ವಿಶ್ವವಿದ್ಯಾಲಯವು ಋಣಿಯಾಗಿದೆ.

ಎಂ. ಎಸ್. ವಿಶ್ವನಾಥಯ್ಯ
ಉಪಕುಲಪತಿ

ಪ್ರಸ್ತಾವನೆ

ಸಾಮಾಜಿಕ, ಸಾಂಸ್ಕೃತಿಕ ಅಧ್ಯಯನವನ್ನು ಗುರಿಯಾಗಿಟ್ಟುಕೊಂಡು ಅದರ ಒಳಪದರಗಳನ್ನು ವಿಶೇಷವಾಗಿ ಮೊಗವೀರರ ಸಾಮಾಜಿಕ ನಡವಳಿಕೆಗಳನ್ನು ಗಮನದಲ್ಲಿರಿಸಿಕೊಂಡು ಅಧ್ಯಯನ ನಡೆಸಲು ಪ್ರಯತ್ನಿಸಲಾಗಿದೆ. ಮಂಗಳೂರು ನಗರ ಹಾಗೂ ಬಂದರಿಗೆ ಅತ್ಯಂತ ಹತ್ತಿರದಲ್ಲಿರುವ ಬೆಂಗರೆ ಗ್ರಾಮ ಮೀನುಗಾರರ ಪರಂಪರಾಗತ ವಾಸಸ್ಥಾನ. ಇದು ಬಹಳ ಹಿಂದೆಯೇ ಪಟ್ಟಣದ ಪ್ರಭಾವಕ್ಕೆ ಒಳಗಾಗಿದೆ. ಇಲ್ಲಿಯ ಮೀನುಗಾರರು ಆಧುನಿಕ ಮೀನುಗಾರಿಕೆಯನ್ನು ಕೂಡ ಬಲ್ಲವರಾಗಿದ್ದಾರೆ. ಈ ಅಧ್ಯಯನದ ಮುಖ್ಯ ಉದ್ದೇಶವೆಂದರೆ ಈ ಮೀನುಗಾರರಲ್ಲಿ ಸಾಂಸ್ಕೃತಿಕವಾಗಿ ಹಾಗೆಯೇ ಉಳಿದುಕೊಂಡಿರುವ ಸಂಗತಿಗಳನ್ನು ಪಟ್ಟಣದ ಪ್ರಭಾವ ಆಧುನಿಕ ಮೀನುಗಾರಿಕೆ ವಿಧಾನ ಅಳವಡಿಸಿಕೊಂಡರೂ ಸಾಮಾಜಿಕ ವ್ಯವಸ್ಥೆಯನ್ನು ಹಾಗೆಯೇ ಕಾದುಕೊಂಡಿರುವ ಮಹತ್ವದ ಅಂಶಗಳನ್ನು ಗುರುತಿಸುವುದಾಗಿದೆ. ಪ್ರಾಥಮಿಕವಾಗಿ ಇದೊಂದು ಗ್ರಾಮದ ಅಧ್ಯಯನ ಪರಿಚಯ. ಈ ಪರಿಚಯವನ್ನು ಪಡೆಯಲು ಅಂಕಿ ಅಂಶಗಳನ್ನು ಸಂಗ್ರಹಿಸಲು ಚರ್ಚೆ, ಇಂಟರ್‌ವ್ಯೂ ವೈಯಕ್ತಿಕ ನಿರೀಕ್ಷೆಯ ತಂತ್ರಗಳನ್ನು ಅಳವಡಿಸಲಾಗಿದೆ.

ವೈಯಕ್ತಿಕವಾಗಿ ಸಂದರ್ಶಿಸಿದ ವ್ಯಕ್ತಿಗಳ ಹೆಸರುಗಳನ್ನು ಹಾಗೂ ಸಾಮಾಜಿಕ ಸಂಸ್ಥೆಗಳನ್ನು ಗುಂಪು

ಚರ್ಚೆಗೆ ಒಳಪಡಿಸಿದ ಗುಂಪುಗಳ ಹೆಸರುಗಳನ್ನು ಪ್ರತ್ಯೇಕವಾಗಿ ಕೊಡಲಾಗಿದೆ.

ಈ ಕಿರು ಹೊತ್ತಿಗೆಯ ಇಂಗ್ಲೀಷ್ ಕರಡು ಪ್ರತಿಯನ್ನು ಸಿದ್ಧಪಡಿಸಲು ಸಹಕರಿಸಿದ ನನ್ನ ಸಹೋದ್ಯೋಗಿ ಅರ್ಥಶಾಸ್ತ್ರ ಸಹಾಯಕ ಪ್ರಾಧ್ಯಾಪಕಿ ಕುಮಾರಿ, ಎಂ. ರಾಣಿಯವರಿಗೂ, ಹಾಗೂ ಇದನ್ನು ಪ್ರಕಟಿಸಲು ಪ್ರೋತ್ಸಾಹಿಸಿದ ನನ್ನ ಆತ್ಮೀಯ ಗೆಳೆಯರಾದ ಪ್ರಸಾರಾಂಗ ನಿರ್ದೇಶಕರಾದ ಶ್ರೀಮಾನ್ ಹೆಚ್. ಆರ್. ದಾಸೇಗೌಡರಿಗೂ, ಇದಕ್ಕೆ ಮುನ್ನುಡಿ ಬರೆದ ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಯವರಾದ ಶ್ರೀಮಾನ್ ಎಂ. ಎನ್. ವಿಶ್ವನಾಥಯ್ಯನವರಿಗೂ, ಮತ್ತು ಅಂತಿಮ ಕರಡಿನ ಸೂಕ್ತ ತಿದ್ದುಪಡಿಗಳನ್ನು ಮಾಡಲು ಸಹಕರಿಸಿದ ನನ್ನ ಸಹೋದ್ಯೋಗಿ ಸಮಾಜಶಾಸ್ತ್ರ ಅಧ್ಯಾಪಕ ಶ್ರೀಮಾನ್ ಪಿ. ಎನ್. ಸುಬ್ಬಾರೆಡ್ಡಿಯವರಿಗೂ ನನ್ನ ಕೃತಜ್ಞತೆಗಳು. ಅತಿ ಶ್ರೀಘ್ರದಲ್ಲಿ ಪ್ರಕಟಣೆಗೆ ಸಿದ್ಧಪಡಿಸಿದ ಪ್ರಸಾರಾಂಗದ ಸಿಬ್ಬಂದಿಯವರಿಗೂ ನನ್ನ ಕೃತಜ್ಞತೆಗಳು.

ಇಂಗ್ಲೀಷ್ ಪ್ರತಿಯಾದ “Fishermen of Bengere” ಎಂಬ ಕೃತಿಯನ್ನು ಕನ್ನಡಕ್ಕೆ ಭಾಷಾಂತರಿಸಲು ಸಹಕರಿಸಿದ ಶ್ರೀಮರ್ಾ ರಸಿಕ ಪುತ್ತಿಗೆಯವರಿಗೆ ನನ್ನ ವಿಶೇಷ ಕೃತಜ್ಞತೆಗಳು.

ಚಿಕ್ಕವೆಂಕಟೇಶಯ್ಯ

ಮೀನುಗಾರರ ಗ್ರಾಮ ಬೆಂಗರೆ

ಗ್ರಾಮದ ಸುತ್ತಮುತ್ತ

ಬೆಂಗರೆ ಗ್ರಾಮವನ್ನು ನಾಲ್ಕು ಭಾಗವಾಗಿ ವಿಂಗಡಿಸಬಹುದು. (1) ಹೊಯ್ಗೆ ಬೆಂಗರೆ (2) ಹೊಯ್ಗೆ ಬೇಂಗರೆಯ ಮುಖ್ಯ ವಿಭಾಗ (3) ಕುದುರೋಳಿ ಬೆಂಗರೆ (4) ಬೊಕ್ಕಪಟ್ಣ ಬೆಂಗರೆ.

ಪ್ರಸ್ತುತ ಅಧ್ಯಯನವು ಬೆಂಗರೆಯನ್ನು ವ್ಯಾಪಿಸುತ್ತದೆ. ಈ ಬೆಂಗರೆ ಗ್ರಾಮದ ಪ್ರಾಕೃತಿಕ ಸನ್ನಿವೇಶ ನನ್ನನ್ನು ಆಕರ್ಷಿಸಿತು. ಆದರ ಸಾಮಾಜಿಕ ಸ್ಥಿತಿಗತಿಯನ್ನು ತಿಳಿಯಲು ಕುತೂಹಲ ಮೂಡಿಸಿತು. ಈ ಗ್ರಾಮ ಅತ್ಯಂತ ಅಪಾಯಕಾರಿ ಜಾಗದಲ್ಲಿ ಇದೆ. ಇಲ್ಲಿ ಬದುಕುವುದೇ ಭಯಾವಹ. ಉತ್ತರ ದಿಕ್ಕನ್ನು ಬಿಟ್ಟರೆ ಉಳಿದ ಮೂರು ದಿಕ್ಕುಗಳಿಂದಲೂ ಈ ಗ್ರಾಮವನ್ನು ನೀರು ಆವರಿಸಿದೆ. ಪೂರ್ವದಿಕ್ಕಿಗೆ ಗುರುಪುರ ಹೊಳೆ. ಪಶ್ಚಿಮಕ್ಕೆ ಅರಬ್ಬೀ ಸಮುದ್ರ, ದಕ್ಷಿಣಕ್ಕೆ ನೇತ್ರಾವತಿ ಗುರುಪುರ ಹೊಳೆಗಳು ಸಮುದ್ರ ಸೇರುವ ಅಳಿವೆ. ಉತ್ತರ ದಿಕ್ಕಿನಲ್ಲಿ ಮಂಗಳೂರು ಬಂದರಿಗೆ ಹೋಗುವ ರಸ್ತೆ ರಾಷ್ಟ್ರೀಯ ಹೆದ್ದಾರಿಯನ್ನು ತಲಪುತ್ತದೆ. ಮನೆಗಳಿರುವ ಜಾಗ, ಉತ್ತರಕ್ಕೆ ರಸ್ತೆಗಾಗಿ ಇರುವ ಜಾಗ ಬಿಟ್ಟರೆ ವ್ಯವಸಾಯಕ್ಕಾಗಲಿ, ವ್ಯವಸಾಯೇತರ ಕಸುಬಿಗಾಗಲಿ ಒಂದು ಚೂರು ಭೂಮಿಯೂ ಹೆಚ್ಚುವರಿ ಇಲ್ಲ. ಇದು ಆ ಗ್ರಾಮದ ಜನ ಮೀನು

ಗಾರಿಕೆ ವೃತ್ತಿಯೇ ಜೀವನಾಧಾರವಾಗಿ ಕಡಲನ್ನೇ ನಂಬಿ ಅವರು ಬದುಕುತ್ತಾರೆಂಬುದನ್ನು ಖಚಿತವಾಗಿ ತಿಳಿಸುತ್ತದೆ.

ಈ ಗ್ರಾಮದ ಒಟ್ಟು ಜನಸಂಖ್ಯೆ ಸುಮಾರು 5,000. ಇದರಲ್ಲಿ ಮುದುಕರು, ಯುವಕರು, ಮುದುಕಿಯರು, ಯುವತಿಯರು ಸೇರಿ 2,400 ಗಂಡಸರೂ, 2,600 ಹೆಂಗಸರೂ ಇದ್ದಾರೆ. ಸುಮಾರು 203 ಕುಟುಂಬಗಳು ಇಲ್ಲಿನ 200 ಮನೆಗಳಲ್ಲಿ ವಾಸಿಸುತ್ತವೆ. ಇರುವ ಅಂಗೈ ಅಗಲ ನೆಲದಲ್ಲೇ ಮನೆಗಳು ಒತ್ತೊತ್ತಾಗಿ ಇವೆ. ಇದು ದಕ್ಷಿಣ ಕನ್ನಡ ಜಿಲ್ಲೆಯ ಬೇರೆಡೆಯ ವಾಸ್ತವ್ಯಗಳಿಗೆ ಹೋಲಿಸಿದರೆ ಭಿನ್ನವಾದುದು. ದಕ್ಷಿಣ ಕನ್ನಡ ಗ್ರಾಮಾಂತರ ಪ್ರದೇಶಗಳಲ್ಲಿ ಮನೆಗಳು ದೂರ ದೂರ. ಅಲ್ಲಲ್ಲಿ ಅವರವರ ಹೊಲ ಗದ್ದೆಗಳಲ್ಲೇ ಇರುವುದು ಕ್ರಮ. ಮೀನುಗಾರರ ಈ ಗ್ರಾಮ ಮಂಗಳೂರು ಸಿಟಿಯಿಂದ ರಸ್ತೆಗುಂಟ 11 ಕಿ. ಮೀ. ದೂರದಲ್ಲಿದೆ. ದೋಣಿ ಮೂಲಕ ಅಳಿವೆ ದಾಟಿ ಹೋದರೆ 3 ಕಿ.ಮೀ. ದೂರದಲ್ಲಿದೆ. ಈ ಬೆಂಗರೆಯ ಜನ ಪ್ರಕೃತಿ ಮಾತೆಯನ್ನು ಬಲವಾಗಿ ನಂಬಿದ್ದಾರೆ. ಆಕೆ ಅವರನ್ನೆಂದೂ ವಂಚಿಸುವುದಿಲ್ಲವೆಂಬ ಭರವಸೆ ಅವರದು. ಈ ನಂಬಿಕೆಯೇ ಇಂಥ ಅಪಾಯಕಾರಿ ಸನ್ನಿವೇಶದಲ್ಲಿಯೂ ಪ್ರಾಚೀನ ಕಾಲದಿಂದಲೂ ಅತ್ಯಂತ ಶಾಂತಿಯಿಂದ ಬದುಕಲು ಈ ಜನರಿಗೆ ಭರವಸೆ ನೀಡಿದೆ. ಅಲ್ಲಿನ ಹಳೆಯ ತಲೆಮಾರಿನ ಜನರಿಗೆ ನೆನಪಿರುವಂತೆ ಆ ಗ್ರಾಮವನ್ನು ಎಂದೂ ಬಿರುಗಾಳಿ ಅಪ್ಪಾಗಿ ಕಾಡಿಸಲಿಲ್ಲ. 100 ವರ್ಷಗಳ

ಹಿಂದೆ ಒಮ್ಮೆ ಮಾತ್ರ ಭಾರಿ ಬಿರುಗಾಳಿಯೊಂದು ಬೀಸಿತ್ತಂತೆ. ಅಲ್ಲಿಂದ ಈಚೆಗೆ ಈ ಬೆಂಗರೆಯ ಜನ ಸ್ವಂತ ಉದ್ಯೋಗದಿಂದ ಭವಿಷ್ಯದ ಬಗ್ಗೆ ಹೆಚ್ಚು ಚಿಂತಿಸದೆ ಸಂತೋಷದಿಂದ ಬದುಕುತ್ತಿದ್ದಾರೆ. ಅವರ ಒಂದೇ ಚಿಂತೆ ಎಂದರೆ ಸತತವಾಗಿ ದಿನವೂ ನಡೆಯು ತ್ತಿರುವ ಭೂಮಿಯ ಕೊರೆತ. ಸಮುದ್ರಕ್ಕಿಂತ 20 ಮಿ. ದೂರದಲ್ಲಿದೆ ಈ ಗ್ರಾಮ. ರಕ್ಷಣಾ ಕ್ರಮಗಳನ್ನು ಕೂಡಲೇ ಕೈಗೊಳ್ಳದಿದ್ದರೆ ಇದು ನಿಜಕ್ಕೂ ಅಪಾಯಕಾರಿ ಜಾಗ. ಗ್ರಾಮದ ಕೆಲವು ಭಾಗ ಗುರುಪುರ ಹೊಳೆಗೆ ಕೇವಲ 5 ಮಿ. ದೂರ ದಲ್ಲಿದೆ. ಇತ್ತ ನದಿ ಅತ್ತ ಸಮುದ್ರ ಎರಡೂ ಈ ಗ್ರಾಮವನ್ನು ತಿನ್ನುತ್ತಿವೆ. ಇಲ್ಲಿನವರಿಗೆ ಉದ್ಯೋಗದ ಸಮಸ್ಯೆ ಇಲ್ಲ. ಪ್ರಕೃತಿ ಮಾತೆಗೆ ಅಂದರೆ ಅರಬ್ಬೀ ಸಮುದ್ರಕ್ಕೆ ನಮಸ್ಕಾರಗಳು. ಅದರ ಸಂಪತ್ತಿಗೆ ಪ್ರಣಾಮಗಳು.

ಇಲ್ಲಿನ ಮೀನುಗಾರಿಕೆ ಸೌಲಭ್ಯ ತುಂಬ ದೊಡ್ಡದು. ಜನಸಂಖ್ಯೆ ಇಮ್ಮಡಿ ಮುಮ್ಮಡಿ ಆದರೂ ಚಿಂತಿಸಬೇಕಿಲ್ಲ. ಇವರನ್ನು ನಿರುದ್ಯೋಗ ಸಮಸ್ಯೆ ಅಲ್ಪಕಾಲ ಬಾಧಿಸುತ್ತದೆ. ಅದು ಜೂನ್‌ನಿಂದ ಸೆಪ್ಟೆಂಬರ್ ವರೆಗೆ ಈ ಕೆಲವು ತಿಂಗಳು ಬಿಟ್ಟರೆ ಈ ಬೆಂಗರೆಯ ಜನಕ್ಕೆ ಏನು ಕೆಲಸ ಮಾಡಲಿ ಎಂಬ ಚಿಂತೆಯೇ ಇರುವುದಿಲ್ಲ. ಚಿಕ್ಕ ಮಕ್ಕಳೂ ಕೂಡ ಆಟವಾಡುತ್ತ ಗಳಿಸುತ್ತಾರೆ. ಅವರ ಆಟ ಪ್ರಾರಂಭ ವಾಗುವುದೇ ಸಣ್ಣ ಪುಟ್ಟ ಗಾಳಗಳಿಂದ. ತಮ್ಮ ಪಾಠಶಾಲೆಯ ಬಿಡುವಿನ ವೇಳೆಯಲ್ಲಿ ಮೀನು ಹಿಡಿ

ಯುವ ಆಟವಾಡುತ್ತಾ ತಮ್ಮ ಕಿಸೆಗೊಂದಷ್ಟು ಕಾಸು ಸಂಪಾದಿಸುತ್ತಾರೆ. ಸಂಪಾದನೆ 50 ಪೈಸೆ ಇರಬಹುದು, ರೂಪಾಯಿ ಆದರೂ ಇರಬಹುದು. ಒಟ್ಟಿನಲ್ಲಿ ಅವರ ಔದ್ಯೋಗಿಕ ತರಬೇತಿ ಆಟದಿಂದಲೇ ಆರಂಭವಾಗುತ್ತದೆ.

ಈ ಗ್ರಾಮವು ಮಂಗಳೂರು ನಗರಕ್ಕೆ ಹತ್ತಿರವಿದ್ದರೂ ನಗರದ ನಾಗರೀಕತೆ ಈ ಬೆಂಗರೆಯ ಜನರ ಮೇಲೆ ಏನೂ ಪರಿಣಾಮ ಮಾಡಿಲ್ಲವೆಂದೇ ಹೇಳಬೇಕು. ನಡೆ, ನುಡಿ, ಆಹಾರ, ವೇಷಭೂಷಣಗಳಲ್ಲಿ ನೂರಕ್ಕೆ ನೂರು ಅವರು ಸಂಪ್ರದಾಯಕ್ಕೆ ಬದ್ಧರಾಗಿದ್ದಾರೆ. ಕಾರು ಬಸ್ಸುಗಳನ್ನು ಅಲ್ಲಿನ ಮಕ್ಕಳು ಬೆರಗುಗಣ್ಣಿಂದ ನೋಡುತ್ತಾರೆ. ಈ ವಾಹನಗಳು ಅವರ ಮುಖಗಳಲ್ಲಿ ಕುತೂಹಲ ಮೂಡಿಸುವುದನ್ನು ಬೆರಳು ಮಾಡಿ ತೋರಿಸಬಹುದು. ನಗರಕ್ಕೆ ತೀರ ಹತ್ತಿರವಿದ್ದರೂ ಧೂಳು ದೂರಸಗಳಿಂದ ಈ ಗ್ರಾಮದ ವಾತಾವರಣ ಕಲುಷಿತವಾಗಿಲ್ಲ. ಈ ಸಂದರ್ಭದಲ್ಲಿ ಭಾರತದ ಪ್ರಸಿದ್ಧ ಸಮಾಜ ಶಾಸ್ತ್ರಗಳಾದ ಡಾ॥ ಎಂ. ಎನ್. ಶ್ರೀನಿವಾಸನ್‌ರವರ ಅನಿಸಿಕೆ ಸತ್ಯವೆಂದು ಕಾಣುತ್ತದೆ.

ಈ ಗ್ರಾಮದಲ್ಲಿ ಕರ್ನಾಟಕ ಇತರೆ ಗ್ರಾಮಗಳಲ್ಲಿರುವಂತೆ ಹತ್ತು ಹಲವು ಜಾತಿಗಳಿಲ್ಲ. ಕೇವಲ ಕೆಲವೇ ಜಾತಿಗಳಿವೆ. ಮೊಗವೀರರ 217 ಕುಟುಂಬಗಳಿವೆ. ಇದು ಗ್ರಾಮದಲ್ಲಿನ ಪ್ರಮುಖ ಜಾತಿ. 15 ಮುಸಲ್ಮಾನ ಕುಟುಂಬಗಳಿವೆ. 6 ಕ್ರಿಶ್ಚಿಯನರ, 20 ಮಲೆಯಾಳಿಗಳ, 3 ಗಾಣಿಗರ ಕುಟುಂಬಗಳಿವೆ.

2 ಪರಿಜನ ಕುಟುಂಬಗಳೂ ಇವೆ. ಗ್ರಾಮೀಣ ಭಾರತ ಉದ್ಯೋಗ ಪದ್ಧತಿಯನ್ನು ನಾವು ಅಧ್ಯಯನ ಮಾಡಿದರೆ ಪ್ರತಿಯೊಂದು ಜಾತಿಗೂ ನಿಶ್ಚಿತ ಉದ್ಯೋಗ ನಿಯಮಿತವಾಗಿರುವುದನ್ನು ಬಹಳವಾಗಿ ಕಾಣಬಹುದು. ಉದಾ: ಮೇಲು ಜಾತಿಯ ಹಿಂದುವು ಹಜಾಮತಿ ಕೆಲಸವನ್ನು ಮಾಡುವುದಿಲ್ಲ. ಅದನ್ನು ಆ ಜಾತಿಯ ಜನರೇ ಮಾಡಬೇಕು. ಇದೇ ರೀತಿ ಬಟ್ಟೆ ಒಗೆಯುವ ಕೆಲಸವನ್ನು ಕೂಡಾ ಅಗಸನೇ ಕೈಗೆತ್ತಿಕೊಳ್ಳಬೇಕು. ಇದು ಕಸಗುಡಿಸುವ, ಮೋರಿ ತೊಳೆಯುವ ಕೆಲಸಕ್ಕೂ ಅನ್ವಯಿಸುತ್ತದೆ. ಅದನ್ನು ನಿಶ್ಚಿತ ಜಾತಿಯ ಜನರೇ ಮಾಡುವುದು. ಆದರೆ ಈ ಬೆಂಗರೆ ಗ್ರಾಮದಲ್ಲಿ ಉದ್ಯೋಗ ಪದ್ಧತಿ ಭಿನ್ನವಾದುದು. ಇಲ್ಲಿರುವ ಎಲ್ಲರೂ ಯಾವುದೇ ಜಾತಿಯವರಿರಲಿ ಮೀನುಗಾರಿಕೆ ಯಲ್ಲೇ ತೊಡಗಿರುತ್ತಾರೆ. ಬಹುಶಃ ಇದು ಇಲ್ಲಿನ ಜನಗಳ ಮೇಲೆ ಆಗಿರುವ ಭೌಗೋಳಿಕ ಪ್ರಭಾವವಿರಬಹುದು. ಇಲ್ಲಿನ ಬೆರಳೆಣಿಕೆಯ ಜನ ಮಾತ್ರ ಸರ್ಕಾರಿ ಉದ್ಯೋಗಕ್ಕಾಗಿ ಇತರ ಉದ್ಯೋಗಗಳಿಗಾಗಿ ಹೊರಗೆ ಹೋಗಿರಬಹುದು.

ಭೌಗೋಳಿಕವಾಗಿ ಪರಿಣಾಮ ಬೀರಿದ ಇನ್ನೊಂದು ಪ್ರಮುಖ ಸಂಗತಿ ಎಂದರೆ ಇವರು ತಮ್ಮ ಮನೆಗಳಿಗೆ ಉಪಯೋಗಿಸಿದ ಸಲಕರಣೆಗಳು. ಎಲ್ಲಾ ಮನೆಗಳು ಹೆಂಚಿನ ಮನೆಗಳು. ಕೇರಳದ ಇತರೆಡೆ ಕಾಣಸುವ ಮೀನುಗಾರರ ವಾಲೆಗರಿಯ ಗುಡಿಸಲುಗಳು ಇಲ್ಲಿ ಇಲ್ಲ, ಬಹುಶಃ ವಾಲೆಗರಿಯ ಕೊರತೆಯಿಂದಾಗಿ ಇವರು ಹೆಂಚುಗಳನ್ನು ಉಪಯೋಗಿಸಿರಬಹುದು.

ಮಾತ್ರವಲ್ಲ ಇದು ಅವರ ಉತ್ತಮ ಆರ್ಥಿಕ ಸ್ಥಿತಿ, ಮನೆಗಳ ಸುಭದ್ರತೆ, ಕಡಿಮೆ ನಿರ್ವಹಣೆಯ ವೆಚ್ಚ ಮುಂತಾದ ಸಂಗತಿಗಳಿಗೂ ಸಾಕ್ಷಿಯಾಗಿದೆ. ಹೆಂಚಿನ ಕಾರ್ಖಾನೆಗಳು ಅಳಿವೆಯ ಆಚೆಕಡೆಗೇ ಇರುವುದು, ಸುಲಭವಾಗಿಯೇ ಹೆಂಚು ದೊರೆಯುವುದು ಕೂಡಾ ಕಾರಣವಿರಬಹುದು. ಎಲ್ಲಾ ಮನೆಗಳು ಬಹಳ ತಗ್ಗಾಗಿ ಪೂರ್ವ ದಿಕ್ಕಿಗೇ ಮುಖ ಮಾಡಿ ಕಟ್ಟಲ್ಪಟ್ಟಿವೆ. ಇದು ಅವರಿಗೆ ಗಾಳಿ ಮಳೆಯ ಹೊಡೆತವನ್ನು ತಡೆದುಕೊಳ್ಳಲು ಸಹಾಯಕವಾಗಿದೆ. ಇದು ಬಹಳ ಜಾಣತನದ ಗೃಹ ನಿರ್ಮಾಣ ಕೌಶಲ್ಯವಾಗಿ ಕಂಡುಬಂದು ಆ ಜನರ ಬೌದ್ಧಿಕ ಜಾಣ್ಮೆಯನ್ನು ಸೂಚಿಸುತ್ತದೆ. ಇಲ್ಲಿನ ನಿವಾಸಿಗಳು ಕುಡಿಯುವ ನೀರಿಗೆ ತಮ್ಮದೇ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಅವರೇ ತೋಡಿದ ಒಂದು ನೂರು ಬಾವಿಗಳು ಗ್ರಾಮದಲ್ಲಿವೆ. ಗ್ರಾಮದಲ್ಲಿ ಚರಂಡಿ ವ್ಯವಸ್ಥೆ ಇಲ್ಲ. ಆದರೂ ಕೊಳಚೆ ಕೊಚ್ಚೆಗಳು ಕಾಣಿಸಿಕೊಂಡು ಅನಾರೋಗ್ಯತರ ವಾತಾವರಣ ಕಾಣಿಸುವುದಿಲ್ಲ. ಬಹುಶಃ ನೆಲದಲ್ಲಿ ನೀರು ಇಲ್ಲವೆ ಒಡನೇ ಹೀರಿಕೊಳ್ಳುವ ಮರಳು ಭೂಮಿಯೇ ಇವಕ್ಕೆ ಕಾರಣವಿರಬಹುದು. ಉಪಯೋಗಿಸಿದ ನೀರನ್ನೆಲ್ಲಾ ಈ ಮರಳು ನೆಲ ಹೀರಿಕೊಳ್ಳುತ್ತದೆ.

ಸಾಂಸ್ಕೃತಿಕ ನಡಾವಳಿ

ಬೆಂಗರೆಯಲ್ಲಿ ಮನರಂಜನೆಗಾಗಿ ಒಂದು ಯುವಕ ಸಂಘ, ಒಂದು ಮಹಿಳಾ ಸಮಾಜ, ಒಂದು ಸ್ಪೋರ್ಟ್ಸ್ ಕ್ಲಬ್ ಮತ್ತು ಎರಡು ವ್ಯಾಯಾಮ ಶಾಲೆಗಳಿವೆ.

ಇಲ್ಲಿನ ಮೋಹನ್ ಬೆಂಗರೆ ಎಂಬುವವರು ಸತತವಾಗಿ 75-76-77ರಲ್ಲಿ ಕುಸ್ತಿ ಛಾಂಪಿಯನ್‌ಶಿಪ್ ಪಡೆದಿದ್ದಾರೆ. ಹಾಗಾಗಿ ಅವರಿಗೆ 'ತುಳುಕೇಸರಿ' ಬಿರುದು ದೊರೆತಿತು. ಇಲ್ಲಿನ ವ್ಯಾಯಾಮ ಶಾಲೆಯಲ್ಲಿ ಹಲವು ಕುಸ್ತಿ ಪಟುಗಳು ತರಬೇತಿ ಪಡೆಯುತ್ತಿದ್ದಾರೆ. ಇಲ್ಲಿನ ಹುಡುಗ ಹುಡುಗಿಯರಿಗೆ ಮಾಧ್ಯಮಿಕ ಶಾಲೆ. ಇಲ್ಲಿನ 12 ಜನ ಅಧ್ಯಾಪಕರಲ್ಲಿ 7 ಜನ ಮಹಿಳೆಯರು.

ಬೆಂಗರೆಯವರು ವಿಶೇಷವಾಗಿ ಆಚರಿಸುವ ಹಬ್ಬಗಳೆಂದರೆ ಗಣೇಶ ಚೌತಿ, ಗೋಕುಲಾಷ್ಟಮಿ, ನೂಲ ಹುಣ್ಣಿಮೆಯ ದಿನ ಸಮುದ್ರ ಪೂಜೆ, ಕದ್ರಿ ಜಾತ್ರೆ, ಯುಗಾದಿ ಮತ್ತು ನವರಾತ್ರಿ ಉತ್ಸವ. ಈ ಎಲ್ಲಾ ಹಬ್ಬಗಳು ವರ್ಷಕ್ಕೊಮ್ಮೆ ಆಚರಿಸಲ್ಪಡುತ್ತದೆ. ಗಣೇಶ ಚೌತಿಯಂದು ಇಲ್ಲಿನ ಜನ ಕದ್ರಿ ದೇವಸ್ಥಾನದಲ್ಲಿ ದೇವರಿಗೆ ತಲಾ 4 ಆಣೆಯಂತೆ ಮುಡಿಪು ಕಟ್ಟುತ್ತಾರೆ. ಮನೆಯ ಯಜಮಾನ ಉಪವಾಸವಿದ್ದು ಗಣೇಶಪೂಜೆ ಮಾಡುತ್ತಾನೆ. ಕೃಷ್ಣಾಷ್ಟಮಿಯು ಊರಿನ ವಿಷ್ಣು ದೇವಾಲಯದಲ್ಲೇ ಮಧ್ಯರಾತ್ರಿಯ ಬಳಿಕ ಆಚರಿಸಲ್ಪಡುತ್ತದೆ. ಮಂಗಳಾರತಿಯ ನಂತರ ಸಾರ್ವಜನಿಕ ಭೋಜನ ನಡೆಯುತ್ತದೆ.

ನೂಲು ಹುಣ್ಣಿಮೆಯಂದು ಆಚರಿಸುವ ಸಮುದ್ರ ಪೂಜೆ ಬೆಂಗರೆಯವರ ದೊಡ್ಡ ಪೂಜೆ. ಸುಮಾರಾಗಿ ಆಗಸ್ಟ್ ತಿಂಗಳ ಕೊನೆಗೆ ಬರುವ ಹುಣ್ಣಿಮೆಯಂದು (ಶ್ರಾವಣ ಹುಣ್ಣಿಮೆ) ಈ ಹಬ್ಬ ಬರುತ್ತದೆ. ಅಂದು ಬೆಳಿಗ್ಗೆ ಊರಿನ ಜನರೆಲ್ಲಾ ದೇವಾಲಯದಲ್ಲಿ ಸೇರಿ

ವಿಷ್ಣು, ಆಂಜನೇಯ, ವೆಂಕಟೇಶ್ವರ ಮುಂತಾದ ದೇವತೆಗಳ ಭಜನೆಗಳನ್ನು ಹಾಡುತ್ತಾರೆ. ನಂತರ ಮೆರವಣಿಗೆಯಲ್ಲಿ ಸಮುದ್ರದ ಬಳಿಗೆ ಸಾಗುತ್ತಾರೆ. ತೆಂಗಿನ ಕಾಯಿ, ಬಾಳೆಹಣ್ಣು, ಹಾಲು ತೆಗೆದುಕೊಂಡು ಹೋಗುತ್ತಾರೆ. ಸಮುದ್ರದ ಬಳಿ ಸಂಕ್ಷಿಪ್ತ ಪ್ರಾರ್ಥನೆಯ ನಂತರ ಊರಿನ ಹಿರಿಯರು ತೆಂಗಿನ ಕಾಯಿಯನ್ನು ಸಮುದ್ರಕ್ಕೆ ಎಸೆಯುತ್ತಾರೆ. ಹಾಲನ್ನು ಎರೆಯುತ್ತಾರೆ. ಹಣ್ಣನ್ನು ನಿವೇದಿಸುತ್ತಾರೆ. ಸಮುದ್ರ ದೇವತೆಯನ್ನು ಸಮೃದ್ಧ ಮೀನಿನ ಬೆಳೆಗಾಗಿ ಆರಾಧಿಸುತ್ತಾರೆ. ಅಂದು ಮೀನು ಹಿಡಿಯುವುದಿಲ್ಲ. ಸಂತೋಷದಿಂದ ನಕ್ಕು ನಲಿಯುತ್ತಾರೆ.

ಕದ್ರಿ ಜಾತ್ರೆ ಇನ್ನೊಂದು ಪ್ರಮುಖ ಹಬ್ಬ. ವಿಶೇಷವಾಗಿ ಮೊಗವೀರರಿಗೆ, ಜೆಪ್ಪು, ಬೆಂಗರೆ, ಬೊಕ್ಕಪಟ್ಣ, ಬೋಳಾರ, ಬೋಳೂರು, ಕುದ್ರೋಳಿ ಮತ್ತು ಯೊಯ್ಗೆ ಈ ಏಳು ಗ್ರಾಮಗಳ ಜನ ಕದ್ರಿ ಜಾತ್ರೆಯಂದು ದೇವಸ್ಥಾನದಲ್ಲಿ ಸೇರಿ ಹಬ್ಬ ಆಚರಿಸುತ್ತಾರೆ. ಆ ದಿನ ರಾತ್ರಿ ತಮ್ಮ ಸ್ವರ್ಗಸ್ಥರಾದ ಹಿರಿಯರಿಗೆ ಹಿರಿಯರ ಆತ್ಮಗಳಿಗೆ ಎಲ್ಲರೂ ಅವರವರ ಮನೆಗಳಲ್ಲಿ ಎಡೆ ಬಡಿಸುತ್ತಾರೆ. ತಿರುಪತಿ ವೆಂಕಟರಮಣನಿಗೆ ಮುಡಿಪು ಕಟ್ಟುತ್ತಾರೆ. ಬಡವರಿಗೆ ಹೊಸ ಬಟ್ಟೆಗಳನ್ನು ದಾನ ಮಾಡುತ್ತಾರೆ. ಜಾತ್ರೆಗೆ ದೂರದ ಹತ್ತಿರದ ಬಂಧುಗಳಿಗೂ ಆಮಂತ್ರಣವಿರುತ್ತದೆ. ಅವರೂ ಈ ಹಬ್ಬದಲ್ಲಿ ಪಾಲುಗೊಳ್ಳುತ್ತಾರೆ.

ಯುಗಾದಿಯಂದು ಎಲ್ಲರೂ ಅವರವರ ಕುಲ ದೇವರನ್ನು ಪೂಜಿಸುತ್ತಾರೆ. ಹೆಚ್ಚಿನವರು ವಿಷ್ಣುವನ್ನೇ

ಪೂಜಿಸುವರು. ಆರ್ಯಸಮಾಜದ ಸದಸ್ಯರು ಯುವಕರಿಗೆ ಕುಡಿತ, ಹೊಗೆಬತ್ತಿ ಸೇದುವುದು ಮುಂತಾದ ದುರ್ಗುಣವನ್ನು ಬಿಡಲು ಉಪದೇಶಿಸುತ್ತಾರೆ. ನೆಂಟರಿಗೆ ಹೊಸವರ್ಷದ ಸಂತಸಕ್ಕಾಗಿ ಔತಣ ಬಡಿಸುತ್ತಾರೆ. ಹೊಸ ವರ್ಷವನ್ನು ಲೆಕ್ಕ ಹಾಕುವುದೂ ಯುಗಾದಿಯಿಂದಲೇ. ಜನರೆಲ್ಲಾ ಅಂದು ತಮ್ಮ ದಿನನಿತ್ಯದ ಕಸುಬು ಮರೆತು ಸಂತೋಷದಿಂದ ಇರುತ್ತಾರೆ.

ನವರಾತ್ರಿಯು 9 ದಿನಗಳ ವರೆಗೆ ಆಚರಿಸುವ ಸುದೀರ್ಘ ಹಬ್ಬ. ಈ ದಿನಗಳಲ್ಲಿ ಭಜನೆ, ಪ್ರಾರ್ಥನೆ, ಪೂಜೆ ಇತ್ಯಾದಿಗಳು ರಾತ್ರಿ 8ರಿಂದ 11ರ ವರೆಗೆ ದೇವಾಲಯಗಳಲ್ಲಿ ಮಾತ್ರವಲ್ಲ ಮನೆಗಳಲ್ಲಿಯೂ ನಡೆಯುತ್ತದೆ.

ಬೆಂಗರೆಯು ಆಟಗಾರರಿಗೆ ಪ್ರಸಿದ್ಧ. ಕುಸ್ತಿ, ಫುಟ್‌ಬಾಲ್, ವಾಲಿಬಾಲ್ ಆಟಗಾರರು ಇಲ್ಲಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಅಮೆಚೂರ್ ಕುಸ್ತಿ ಸಂಘವು ಪ್ರತಿವರ್ಷ 'ತುಳು ಕೇಸರಿ' 'ತುಳು ಕುಮಾರ' ಬಿರುದಿನ ಸ್ಪರ್ಧೆಯನ್ನು ನಡೆಸುತ್ತದೆ. ಶ್ರೀ ಮೋಹನ್ ಬೆಂಗರೆಯವರು ಕಳೆದ 3 ವರ್ಷಗಳಿಂದ ತುಳು ಕೇಸರಿ ಪಟ್ಟ ಪಡೆಯುತ್ತಾರೆ. ಅವರು ದಕ್ಷಿಣ ಕನ್ನಡ ಜಿಲ್ಲೆಯ ಕುಸ್ತಿ ಛಾಂಪಿಯನ್. ಶ್ರೀ ಕುಸುಪಾಲ ಬೆಂಗರೆ 1977ರ ತುಳು ಕುಮಾರ ಟೈಟಲ್ ಗೆದ್ದಿದ್ದಾರೆ.

1976ರಲ್ಲಿ ಪಾಟಿಯಾಲಾದಲ್ಲಿ ನಡೆದ ಅಖಿಲ ಭಾರತ ಗ್ರಾಮಾಂತರ ಈಜು ಸ್ಪರ್ಧೆಯಲ್ಲಿ ಬೆಂಗರೆಯ ಆರು ಬಾಲಕರು ಕರ್ನಾಟಕವನ್ನು ಪ್ರತಿನಿಧಿಸಿದ್ದರು.

ಬೆಂಗರೆಯ ಫುಟ್‌ಬಾಲ್ ಆಟಗಾರರು 1972ರಲ್ಲಿ ಬೆಂಗಳೂರಿನಲ್ಲಿ ನಡೆದ ಸ್ಟಾಫರ್ಡ್ ಛಾಲೆಂಜ್ ಕಪ್ ಫುಟ್‌ಬಾಲ್ ಪಂದ್ಯದಲ್ಲಿ ಪ್ರಿಕ್ವಾರ್ಟರ್ ಫೈನಲ್‌ವರೆಗೆ ತಲುಪಿದರು. ಈ ಎಲ್ಲಾ ಆಟಗಳಲ್ಲಿಯೂ ಮೊಗವೀರ ಯುವಕರದ್ದೇ ಮೇಲುಗೈ.

ಮೊಗವೀರರು ನಂಬಿ ಆರಾಧಿಸುವ ಭೂತಗಳ ಸಂಗತಿ ಕುತೂಹಲಕಾರಿ. ವಿಷ್ಣು, ಶ್ರೀನಿವಾಸ, ಹನುಮಾನ್ ಮುಂತಾದ ದೇವರುಗಳನ್ನು ಆರಾಧಿಸುವುದರ ಜೊತೆಗೆ ಈ ಜನ ಭೂತಗಳನ್ನು ನಂಬುತ್ತಾರೆ. ಬೊಬ್ಬರ್ಯ, ಗುಳಿಗ, ಬಂಟ, ಕಲ್ಲುರುಟಿ, ಪಂಜುರುಲಿ ಮುಂತಾದುವೇ ಈ ಭೂತಗಳು. ಶನಿವಾರಗಳಲ್ಲಿ ದೇವರುಗಳನ್ನು ಪೂಜಿಸಿದರೆ ಏಕಾದಶಿಯಂದು ಭೂತಗಳನ್ನು ಆರಾಧಿಸುತ್ತಾರೆ. ಮೊಗವೀರರು ಹೆಚ್ಚಾಗಿ ನಂಬುವ ಗುಳಿಗ ವರ್ಷಕ್ಕೊಮ್ಮೆ ಮಂಗಳವಾರ ಪೂಜಿಸಲ್ಪಡುತ್ತದೆ. ಈ ಭೂತಗಳನ್ನು ವಿಶೇಷವಾಗಿ ಆರಾಧಿಸುವುದು ಪತ್ತನಾಜೆ ಸಮಯದಲ್ಲಿ. ಈ ಪತ್ತನಾಜೆ ಕುಂಭ ಮಾಸದಲ್ಲಿ ಬರುತ್ತದೆ.

ಮೀನುಗಳಿಗೆ ಬರ ಬಂದಾಗ ದೇವಾಲಯಗಳಲ್ಲಿ ದೇವರುಗಳಿಗೆ ಎಳನೀರಿನ ಅಭಿಷೇಕ ಮಾಡಿಸುತ್ತಾರೆ. ಕದ್ರಿಯ ಮಂಜುನಾಥನಿಗೇ ಈ ಅಭಿಷೇಕ ಮಾಡಿಸುವುದು. ಆಗಲೇ ಧ್ವಜಸ್ತಂಭವನ್ನು ಪೂಜಿಸುತ್ತಾರೆ. ಕಾಲರ, ಸಿಡುಬು, ಪ್ಲೇಗು ಮುಂತಾದ ಕಾಯಿಲೆಗಳು ಬಂದಾಗ ವೈದ್ಯಕೀಯ ಉಪಚಾರ ಪಡೆಯುವುದರ ಜೊತೆಗೆ ದೇವರುಗಳಿಗೆ ಹರಕೆಯನ್ನು ಸಲ್ಲಿಸುತ್ತಾರೆ.

ಇಂತಹ ಸಂದರ್ಭಗಳಲ್ಲಿ ಬೊಬ್ಬರಿಯು ಎಂಬ ಭೂತವನ್ನು ಹೆಚ್ಚಿನ ಜನ ಪೂಜಿಸುತ್ತಾರೆ. ಬೊಬ್ಬರಿಯುನಿಗೆ ಕೋಲ ಕೊಡುವುದೂ ಇದೆ. ಕೋಲದ ಪಾತ್ರಿಯ ಮೇಲೆ ಆವೇಶ ಬಂದು ಭೂತ ರೋಗದ ಕಾರಣ ಮತ್ತು ಪರಿಹಾರ ತಿಳಿಸುತ್ತದೆ. ಈ ರೀತಿಯ ಆಚರಣೆ ಬೋಳೂರು, ಬೋಳಾರ, ಕದ್ರಿ, ನೀರೇಶ್ವರ, ಹೊಯ್ಗೆ, ಬೆಂಗರೆ ಮತ್ತು ಬೊಕ್ಕಪಟ್ಟಣ ಮುಂತಾದ ಗ್ರಾಮ ಗಳಲ್ಲಿದೆ.

ಹೆಚ್ಚಿನ ಹಿಂದೂ ಮೀನುಗಾರರ ಮನೆಗಳಲ್ಲಿ ತೂಗುಹಾಕಿದ ದೇವರುಗಳ ಫೋಟೋವನ್ನು ನೋಡಿ ದಾಗ ಇವರೆಲ್ಲಾ ಆಸ್ತಿಕರೆಂದು ಕಾಣುತ್ತದೆ. ಇವರಿಗೆ ದೇವರಲ್ಲಿ ನಂಬಿಕೆ ಇದೆ. ಇವರೆಲ್ಲಾ ಹೆಚ್ಚಾಗಿ ವೆಂಕಟೇಶ್ವರ, ವಿಷ್ಣು, ಆಂಜನೇಯನ ಫೋಟೋವನ್ನು ಪೂಜಿಸುತ್ತಾರೆ. ಗ್ರಾಮದಲ್ಲಿರುವ ಕೆಲವೇ ಮುಸಲ್- ಮಾನರಿಗೆ ತಮ್ಮ ಸ್ವಂತ ಮಸೀದಿ ಇದೆ. ಅವರನ್ನು ಧಾರ್ಮಿಕ ಆಚರಣೆಯ ಬಗ್ಗೆ ವಿಚಾರಿಸಿದಾಗ ಅವರು ತಮ್ಮ ಪೂರ್ವಿಕರ ಪದ್ಧತಿಯನ್ನು ಪಾಲಿಸುತ್ತಾ ಬರುವು ದಾಗಿ ಹೇಳಿದರು.

ಗ್ರಾಮದಲ್ಲಿ ಹಲವಾರು ಜಾತಿಯವರು ಇದ್ದರೂ ಇವರೆಲ್ಲರೂ ತುಳು ಮತ್ತು ಕನ್ನಡ ಎರಡೂ ಭಾಷೆ ಯನ್ನೂ ಚೆನ್ನಾಗಿ ಮಾತನಾಡಬಲ್ಲರು. ಆದರೆ ವಿಶೇಷ ವಾಗಿ ಇವರು ಮನೆಯಲ್ಲಿ ನೆರೆ ಕೆರೆಯವರೊಡನೆ ತುಳು ಹೊರಗಿನವರೊಡನೆ ಕನ್ನಡ ಮಾತನಾಡುತ್ತಾರೆ. ಹೊರಗಿ ನವರನ್ನು ಪಕ್ಕನೆ ಗುರುತಿಸುವ ಜಾಣ್ಮೆ ಇವರಲ್ಲಿ ಇದೆ.

ಹೊರಗಿನವರೆಂದು ತಿಳಿಯುತ್ತಲೇ ಕನ್ನಡದಲ್ಲಿ ಮಾತ ನಾಡುತ್ತಾರೆ. ಹಾಗೆಂದು ಭಾಷೆ ಬೇರೆಯಾದ ಮಾತ್ರಕ್ಕೆ ವ್ಯವಹಾರದಲ್ಲಿ ಯಾವ ಭಿನ್ನತೆಯೂ ಕಾಣುವುದಿಲ್ಲ.

ಈ ಗ್ರಾಮಕ್ಕೆ ಕೆಲವು ಸಾಮಾನ್ಯ ಸೌಕರ್ಯಗಳಿವೆ. 7ನೇ ತರಗತಿಯವರೆಗಿನ ಶಾಲೆ, ಒಂದು ಚಿಕ್ಕ ಆಸ್ಪತ್ರೆ, ಒಂದು ಸಹಕಾರ ಸಂಘ ಇದೆ. ಈ ಸಹಕಾರ ಸಂಘ ಇಲ್ಲಿನ ಹಲವರಿಗೆ ಸಾಲ ಕೊಟ್ಟಿದೆ. ಅವರ ಒಂದೇ ಸಮಸ್ಯೆ ಎಂದರೆ ದಿನದಿನವೂ ಅವರು ವಾಸಿಸುತ್ತಿದ್ದ ನೆಲವನ್ನು ಸಮುದ್ರ ಕಬಳಿಸುತ್ತಿರುವುದು. ಮೊದಲು ತುಂಬಾ ವಿಸ್ತಾರವಾದ ಜಾಗವಿತ್ತು. ಗುರುಪುರ ಹೊಳೆಯ ಪ್ರವಾಹ ಪರಿವರ್ತನೆಯಿಂದಾಗಿ ಕ್ರಮೇಣ ಈ ಭೂಸವೆತ ಪ್ರಾರಂಭವಾಯಿತು. ಮಳೆಗಾಲದಲ್ಲಿ ಪ್ರತಿದಿನವೂ ಒಂದೊಂದು ಮಿ.ನಷ್ಟು ಅಗಲ ನೆಲವನ್ನು ನದಿ ನುಂಗುತ್ತಿರುವುದನ್ನು ಈ ಜನ ನೋಡುತ್ತಾರೆ.

ಇದನ್ನು ಸಕಾಲದಲ್ಲಿ ತಡೆಯದಿದ್ದರೆ ಇಡಿಯ ಗ್ರಾಮವೇ ಅರಬ್ಬೀ ಸಮುದ್ರದ ಹೊಟ್ಟೆಯಲ್ಲಿ ಕರಗಿ ಹೋಗಬಹುದು. ಪ್ರತಿಯೊಂದು ಚುನಾವಣೆಯ ಕಾಲ ದಲ್ಲಿಯೂ ಅಧಿಕಾರಿಗಳು ಗ್ರಾಮವನ್ನು ಭೂಸವೆತದಿಂದ ರಕ್ಷಿಸುವ ಭರವಸೆ ನೀಡುತ್ತಾರೆ. ಆದರೆ ಈ ಭರವಸೆ ಕೃತಿಗಿಳಿಯಲಿಲ್ಲ. ಇನ್ನೊಂದು ಪ್ರಮುಖ ಸಮಸ್ಯೆ ಎಂದರೆ ಮಳೆಗಾಲದಲ್ಲಿ ಉಂಟಾಗುವ ತಾತ್ಕಾಲಿಕ ನಿರು ದ್ಯೋಗ. ಜೂನ್‌ನಿಂದ ಸೆಪ್ಟೆಂಬರ್ ಒಳಗಿನ 4 ತಿಂಗಳು ಸಮುದ್ರದಲ್ಲಿ ಮೀನು ಹಿಡಿಯುವುದು ಅಸಾಧ್ಯ. ಹಾಗಾಗಿ ಮೀನುಗಾರಿಕೆಯನ್ನೇ ಅವಲಂಬಿಸಿರುವ ಇಲ್ಲಿನ

ಜನ ಈ 4 ತಿಂಗಳು ನಿರುದ್ಯೋಗಿಗಳಾಗಿಬಿಡುತ್ತಾರೆ. ಬೇರೆ ಕಸುಬಿನ ಅನುಭವವಿಲ್ಲದ ಈ ಜನ ತಾತ್ಕಾಲಿಕ ವಾಗಿ ಬೇರೆ ಉದ್ಯೋಗ ಮಾಡುವುದು ಕಷ್ಟವಿದೆ. ಮಳೆಗಾಲಕ್ಕಾಗಿ ಉಳಿತಾಯ ಮಾಡಿದ ಕೆಲವೇ ಜನರನ್ನು ಬಿಟ್ಟರೆ ಬಹು ಜನರಿಗೆ ಅನ್ನ ಬಟ್ಟೆಗಳೂ ಸಮಸ್ಯೆಯೇ. ಅವರು ತಮ್ಮದೇ ಆದ ವಿಮಾ ಯೋಜನೆಯೊಂದನ್ನು ಇಂಥ ಪರಿಸ್ಥಿತಿಗಾಗಿ ಎಂದೇ ಇಟ್ಟುಕೊಂಡಿದ್ದರೂ ಇದು ಸಾಕಷ್ಟು ಶಕ್ತಿಶಾಲಿ ಉಪಕರಣವಾಗಿಲ್ಲ. ಈ ದೆಸೆಯಲ್ಲಿ ಸರ್ಕಾರ ಉದಾರವಾಗಿ ಸಹಾಯ ಮಾಡಲು ಮುಂದೆ ಬರಬೇಕು. ಅಥವಾ ಈ ಕಠಿಣ ಕಾಲವನ್ನು ಸರಿಪಡಿಸಲು ಬೇರೆ ಯಾವುದಾದರೂ ಉದ್ಯಮಗಳು ಇಂಥ ಜಾಗದಲ್ಲಿ ಪ್ರಾರಂಭಿಸಲ್ಪಡಬೇಕು. ಈಗ ಇವರು ತಮ್ಮ ಈ ಕೆಲಸ ವಿಲ್ಲದ ಕಾಲವನ್ನು ವ್ಯರ್ಥವಾಗಿ ಕಳೆಯುವ ಬದಲು ಬಲೆ ನೆಯ್ಯುವುದು, ಬಲೆ ರಿಪೇರಿ ಮಾಡುವುದು, ಆಟೋಟ ಗಳಲ್ಲಿ ತೊಡಗುವುದು, ಮುಂತಾದುವುಗಳಲ್ಲಿ ಆಸಕ್ತಿ ವಹಿಸುತ್ತಾರೆ. ಆದರೆ ಇವೆಲ್ಲ ಸೇರಿ ಇವರ ಹೊಟ್ಟೆ ಬಟ್ಟೆಯ ಸಮಸ್ಯೆ ಬಗೆಹರಿಸಲಾರದು.

ಗ್ರಾಮದಲ್ಲಿ ಆರು ಜಾತಿಯ ಜನರಿದ್ದಾರೆ ಎಂದು ಮೊದಲೇ ಹೇಳಿದೆ. ಇವರಲ್ಲಿ ಹೆಚ್ಚಿನವರು ಮೊಗ ವೀರರು. ಸಾಮಾಜಿಕ ಜೀವನದಲ್ಲಿ ಇವರದೇ ಮೇಲುಗೈ. ಹಾಗಾಗಿ ಈ ಜನರ ಪರಂಪರಾಗತ ಆಚರಣೆಗಳನ್ನು ಜನನ, ವಿವಾಹ, ಮರಣ ಮುಂತಾದ ಸಂದರ್ಭದ ಆಚರಣೆಗಳನ್ನು ಅಭ್ಯಸಿಸುವುದು ಅಗತ್ಯ. ಇವರು ತಮ್ಮ ಎಲ್ಲಾ ಸಮಸ್ಯೆಗಳನ್ನು ಹೊರಗಿನ ಸರ್ಕಾರಿ ಏಜನ್ಸಿಗಳ ಅಂದರೆ ಪೋಲೀಸು, ಕೋರ್ಟುಗಳ ಸಹಾಯ

ವಿಲ್ಲದೆ ಹೇಗೆ ಬಗೆಹರಿಸುತ್ತಾರೆ ಎಂಬುದು ತಿಳಿಯ ಬೇಕಾದ ಸಂಗತಿ.

ಗುರುಕಾರರು — ಒಂದು ಸಾಮಾಜಿಕ ಸಂಸ್ಥೆ

ಮೊಗವೀರರಲ್ಲಿ ತಮ್ಮ ಜಾತಿಯ 5 ಜನ ಗುರು ಕಾರರಿರುವ ಅನಧಿಕೃತ ಜಾತೀಯ ಕೋರ್ಟುಗಳಿವೆ. ಈ ಗುರುಕಾರರು ಒಂದು ವ್ಯವಸ್ಥಿತ ಸರ್ಕಾರದಂತೆ ಎಲ್ಲಾ ಸ್ವಜಾತೀಯ ಬಾಂಧವರ ಹಿತಾಸಕ್ತಿಗಳನ್ನು ಕಾಪಾಡಲು ಎಲ್ಲ ತರದ ಪಾತ್ರವನ್ನು ನಿರ್ವಹಿಸು ತ್ತಾರೆ. ವಿವಾದಗಳನ್ನು ಬಗೆಹರಿಸುವಲ್ಲಿ ಇವರು ನ್ಯಾಯಾಧೀಶರು. ಮದುವೆಗಳಲ್ಲಿ ಪುರೋಹಿತರು. ಇವರು ಎಲ್ಲಾ ಕುಟುಂಬಗಳ ಮಹತ್ವ ಸಮಾರಂಭ ಗಳಲ್ಲಿಯೂ, ಸಾರ್ವಜನಿಕ ಸಮಾರಂಭಗಳಲ್ಲಿಯೂ ಆಹ್ವಾನಿತರು. ಇವರು ಒಂದು ಜಾತಿಗೆ ಸೀಮಿತ ರಾದರೂ ಇವರ ತೀರ್ಪುಗಳನ್ನು ಇತರ ಜಾತಿಯ ಸದಸ್ಯರು ಗೌರವಿಸುತ್ತಾರೆ. ಯಾವುದೇ ಧಾರ್ಮಿಕ ಸಮಾರಂಭಗಳು ಇವರು ಭಾಗವಹಿಸದೆ ನಡೆಯುವುದಿಲ್ಲ. ಇವರ ಆಶೀರ್ವಾದ, ಒಪ್ಪಿಗೆ ಇಲ್ಲದೆ ಜಾತಿಯ ಹೆಣ್ಣು ಗಂಡುಗಳು ಮದುವೆಯಾಗುವಂತಿಲ್ಲ. ಇತರ ಜಾತಿ ಯವರೂ ಇವರನ್ನು ಮದುವೆಗೆ ಆಹ್ವಾನಿಸುತ್ತಾರೆ. ಇವರು ರಕ್ಷಕರು, ಸಹಾಯಕರು, ಮಿತ್ರರು, ಉಪದೇಶ ಕರು ಮತ್ತು ಮಾರ್ಗದರ್ಶಕರು ಆಗಿರುತ್ತಾರೆ. ಎಲ್ಲ ಸಾಮಾಜಿಕ, ಧಾರ್ಮಿಕ ಸಂಗತಿಗಳಲ್ಲೂ ಅವರ ತೀರ್ಪು ಅಂತಿಮವಾದುದು. ಇವರ ಆದೇಶವನ್ನು ಮೀರುವ ವರು ಜಾತಿಯಿಂದ ಹೊರಹಾಕಲ್ಪಡುತ್ತಾರೆ. ಸಣ್ಣ

ಪುಟ್ಟ ಅಪರಾಧಗಳಿಗೆ ಇವರು ಸಣ್ಣ ಪ್ರಮಾಣದ ದಂಡ ವನ್ನೂ ವಸೂಲು ಮಾಡುತ್ತಾರೆ. ಒಬ್ಬ ಗುರುಕಾರ ನಾದರೂ ಭಾಗವಹಿಸದೆ ಅವರ ಜಾತಿಯ ಹೆಣ ಸುಡು ವಂತೆ ಇಲ್ಲ.

ಸಾಮಾಜಿಕ, ಧಾರ್ಮಿಕ ಸಂಗತಿಗಳಲ್ಲಿ ಸರ್ವ ಸಾಮಾನ್ಯರಾಗಿರುವ ಇವರು ತಮ್ಮ ಜಾತಿ ಬಾಂಧವರೇ ವಂತಿಕೆ ನೀಡಿದ ಒಂದು ಸಹಾಯ ನಿಧಿಯನ್ನು ನಿರ್ವ ಹಿಸುತ್ತಾರೆ. ಸಮೃದ್ಧಿಯ ಕಾಲದಲ್ಲಿ ಇವರು ಚೆನ್ನಾಗಿ ಸಂಪಾದಿಸುತ್ತಾರೆ. ಕೆಲವರು ಉಳಿತಾಯ ಮಾಡಲೂ ಶಕ್ತರು. 2 ರಿಂದ 20 ರೂ. ಗಳವರೆಗೆ ಅವರವರ ಶಕ್ತಿ ಸ್ವಭಾವಗಳಿಗೆ ಅನುಗುಣವಾಗಿ ಈ ಗ್ರಾಮ ವಿಮಾನಿಧಿಗೆ ವಂತಿಕೆ ಸಲ್ಲಿಸುತ್ತಾರೆ. ಈ ನಿಧಿಯಿಂದ ಕಷ್ಟಕಾಲದಲ್ಲಿ ಜಾತಿ ಬಾಂಧವರಿಗೆ ಸಹಾಯ ದೊರೆಯುತ್ತದೆ. ಪ್ರತಿ ವರ್ಷ ನಿರುದ್ಯೋಗಿಗಳಾಗುವ ನಾಲ್ಕು ತಿಂಗಳ ಕಾಲ ಬಡವರಿಗೆ ತಮ್ಮ ನಿರ್ವಹಣೆಗೆ ಈ ನಿಧಿಯಿಂದ ಸಾಲ ದೊರೆಯುತ್ತದೆ. ಮದುವೆ ಮರಣಗಳ ಸಂದರ್ಭ ದಲ್ಲಿಯೂ ಈ ನಿಧಿಯಿಂದ ಖರ್ಚಿಗೆ ಸಾಲ ದೊರೆಯು ತ್ತದೆ.

ಇದೊಂದು ಉತ್ತಮ ಧನ ಸಹಾಯ ವ್ಯವಸ್ಥೆ. ಇದನ್ನು ಇತರರೂ ಅನುಕರಿಸಬಹುದು. ಗುರುಕಾರರು ಈ ನಿಧಿಯ ವಿಶ್ವಸ್ಥರು. ಇವರು ಈ ನಿಧಿಯ ಲೆಕ್ಕಪತ್ರಗಳನ್ನು ಇಡುತ್ತಾರೆ.

ಈ ಜಾತೀಯ ಕೋರ್ಟುಗಳು—ಗುರುಕಾರರು— ಇರುವುದರಿಂದ ಸಣ್ಣ ಪುಟ್ಟ ಜಗಳಗಳು, ಗುಂಪು ಘರ್ಷಣೆ

ಗಳು, ಸಣ್ಣಪುಟ್ಟ ಅಪರಾಧಗಳು ಬಹುಪಾಲು ತಡೆಯು ಲ್ಪಡುತ್ತವೆ. ಈ ಗುರುಕಾರರ ಸಹಾಯವಿಲ್ಲದೆ ಯಾವ ಪೋಲಿಸು ಅಧಿಕಾರಿಯೂ ಗ್ರಾಮದಲ್ಲಿ ಯಾವುದೇ ತನಿಖೆ ನಡೆಸುವಂತಿಲ್ಲ. ಈ ಜಾತೀಯ ಕೋರ್ಟುಗಳಿಂದಾಗಿ ಗ್ರಾಮದಲ್ಲಿ ಶಾಂತಿ ನೆಲೆಸಲು ತುಂಬಾ ಸಹಾಯ ದೊರೆತಿದೆ.

ವಿಧವೆಯರ ವಿವಾಹ, ಮರು ವಿವಾಹ, ವಿವಾಹ ವಿಚ್ಛೇದನ, ಅಂತರ ಜಾತೀಯ ವಿವಾಹ, ಮುಂತಾದುವು ಈ ಗುರುಕಾರರುಗಳ ಅಧಿಕಾರ ವ್ಯಾಪ್ತಿಗೆ ಒಳಪಡುತ್ತವೆ. ವಿವಾಹಗಳು ಗುರುಕಾರರ ಅನುಮತಿ ಭಾಗವಹಿಸುವಿಕೆ ಇಲ್ಲದೆ ನಡೆಯಲಾರವು. ಈ ಗುರುಕಾರಿಕೆ ವಂಶ ಪರಂ ಪರೆಯಾದುದು. ಒಂದು ವೇಳೆ ಗುರುಕಾರರ ಮಕ್ಕಳು ನಂಬಿಕೆಗೆ ಅನರ್ಹರು ಅನೀತಿವಂತರೂ ಆಗಿದ್ದರೆ ಆ ಮಾತು ಬೇರೆ. ಒಬ್ಬ ಗುರುಕಾರನ ಹಿರಿಯ ಮಗ ಮಾತ್ರ ಪರಂಪರೆಯಿಂದ ಗುರುಕಾರನಾಗಬಲ್ಲ.

ಮೊಗವೀರರಲ್ಲಿ ಮದುವೆ ಇತರ ಜಾತಿಗಳಂತೆ ಹೆಚ್ಚು ಖರ್ಚಿನದಲ್ಲ. ವರದಕ್ಷಿಣೆ ಪದ್ಧತಿ ಇದ್ದರೂ ಹುಡುಗಿಯ ತಂದೆಯ ಮೇಲೆ ಒತ್ತಾಯ ಹೇರುವಂತಿಲ್ಲ. ಅವರವರ ಆರ್ಥಿಕ ಶಕ್ತ್ಯಾನುಸಾರ ವರದಕ್ಷಿಣೆ ಕೊಡ ಬಹುದು. ಇದರಲ್ಲಿ ಏನಾದರೂ ತಕರಾರುಗಳು ಬಂದರೆ ದೂರು ಗುರುಕಾರರ ಬಳಿ ಹೋಗುತ್ತದೆ. ಅವರ ತೀರ್ಪು ಮಾನ್ಯವಾಗಬೇಕು. ಇಲ್ಲಿ ಇನ್ನೊಂದು ಪದ್ಧತಿ ಯಿದೆ. ವಧುವಿನ ಕಡೆಯಿಂದ ವರನು ಪಡೆದ ವರದಕ್ಷಿಣೆ ಯಷ್ಟೇ ಹಣವನ್ನು ಸೇರಿಸಿ ಅದರಿಂದ ಆಭರಣಗಳನ್ನು

ಮಾಡಿಸಿ ಅದನ್ನು ಆತ ಹುಡುಗಿಗೆ ತೊಡಿಸಬೇಕು. ಇದೊಂದು ಒಳ್ಳೆಯ ಕ್ರಮ. ಇದು ವರನ ಕಡೆಯವರ ಹಣದ ದುರಾಸೆಯನ್ನು ತಡೆಯುತ್ತದೆ. ಮದುವೆಯ ಶಾಸ್ತ್ರದಲ್ಲಿ ಇತರ ಹಿಂದೂಗಳಿಗೂ ಮೊಗವೀರರಿಗೂ ಎದ್ದು ಕಾಣುವ ವ್ಯತ್ಯಾಸವೇನೂ ಕಾಣುವುದಿಲ್ಲ. ಹಾಲು ಹುಯ್ಯುವುದು, ಹುಡುಗಿಯ ಬಲಗೈಯನ್ನು ಹುಡುಗನ ಎಡಗೈ ಮೇಲೆ ಇಡುವುದು ಮುಂತಾದ ಶಾಸ್ತ್ರಗಳು ಸಮಾನ. ವಧು ವರರು ಹಿರಿಯರ ಕಾಲು ಮುಟ್ಟಿ ಆಶೀರ್ವಾದ ಪಡೆಯುವ ಪದ್ಧತಿಯೂ ಇವರಲ್ಲಿ ಇದೆ. ಮದುವೆ ನಿಶ್ಚಯ ಮಾಡುವಲ್ಲಿ ಮತ್ತು ಸೋಬಾನ ಮಾಡುವಲ್ಲಿ ಇತರ ಜಾತಿಗೂ ಮೊಗವೀರರಿಗೂ ಏನೂ ವ್ಯತ್ಯಾಸವಿಲ್ಲ. ಮೊಗವೀರರಲ್ಲಿ ಒಳಸಂಬಂಧದಲ್ಲಿ ಮದುವೆ ಆಗುವ ಪದ್ಧತಿ ಜಾರಿಯಲ್ಲಿದೆ. ವಿಧವಾ ವಿವಾಹ ಮತ್ತು ವಿಧುರ ವಿವಾಹ ಪದ್ಧತಿ ಇವರಲ್ಲಿ ಇದೆ.

ಹೆಂಗಸಿಗೆ ಮತ್ತು ಗಂಡಸಿಗೆ ವಿವಾಹ ವಿಚ್ಛೇದನವಾಗುವ ಸಂದರ್ಭದಲ್ಲಿ ಮರು ಮದುವೆಯೂ ಇದೆ. ವಿಧವೆಯ ಮದುವೆಯಲ್ಲಿ ತಾಳಿ ಕಟ್ಟುವುದೊಂದನ್ನು ಬಿಟ್ಟು ಉಳಿದೆಲ್ಲಾ ಕ್ರಮವು ಹೊಸ ಮದುವೆಯಂತೆಯೇ ಇರುತ್ತದೆ. ಮರು ಮದುವೆಯಲ್ಲಾದರೆ ಈ ನಿಷೇಧವಿಲ್ಲ. ವಿಧವೆಯ ವಿವಾಹದಲ್ಲಾದರೆ ಹೂವಿನ ಮಾಲೆಗಳ ಬದಲಾವಣೆಯಿಂದ ಮದುವೆ ನೆರವೇರುತ್ತದೆ. ಸಾಮಾನ್ಯವಾಗಿ ವಿಧವೆಯು ವಿಧುರನನ್ನಾಗಲಿ ಅಥವಾ ಬಿಟ್ಟವನನ್ನಾಗಲಿ ಮದವೆಯಾಗುತ್ತಾಳೆ. ವಿಧವಾ ವಿವಾಹವು ಹೆಣ್ಣಿಗೆ ತನ್ನ ಜೀವಮಾನದಲ್ಲಿ ಕೇವಲ ಮೂರು ಸಲ ಮಾತ್ರ ಸಾಧ್ಯ. ಆದರೆ ಗಂಡಸಿಗೆ ಈ

ನಿರ್ಬಂಧವಿಲ್ಲ. ಮೊದಲ ಗಂಡನಲ್ಲಿ ಹುಟ್ಟಿದ ಮಕ್ಕಳು ತಾಯಿಯ ಜೊತೆಯಲ್ಲಾದರೂ ಇರಬಹುದು. ಅಜ್ಜ—ಅಜ್ಜಿಯರ ಜೊತೆಯಲ್ಲಾದರೂ ಇರಬಹುದು. ಇದು ವಿಧವೆಯ ಮದುವೆಗೆ ಮೊದಲೇ ಗುರುಕಾರರ ಮತ್ತು ಹಿರಿಯ ಬಂಧುಗಳ ಎದುರು ತೀರ್ಮಾನವಾಗಬೇಕಾದ ಸಂಗತಿ. ಇವರಲ್ಲಿ ಹುಡುಗಿಯರ ಮದುವೆಯು ಪ್ರಾಯ 18 ರಿಂದ 20. ಆದರೆ ಹುಡುಗರಿಗೆ 25 ರಿಂದ 35. ಪುನರ್ ವಿವಾಹ ಮತ್ತು ವಿಧವಾ ವಿವಾಹಕ್ಕೆ ಈ ವಯೋಮಿತಿ ಅಡ್ಡಿ ಬರುವುದಿಲ್ಲ. ಮದುವೆಗೆ ವಯೋಮಿತಿಯ ಕಟ್ಟುನಿಟ್ಟಾದ ನಿರ್ಬಂಧವಿಲ್ಲ. ಆದರೆ ಹುಡುಗಿ ಹುಡುಗನಿಗಿಂತ ಚಿಕ್ಕವಳಾಗಿರಬೇಕು ಎಂಬ ಪದ್ಧತಿ ಜಾರಿಯಲ್ಲಿದೆ.

ಮೊಗವೀರರಲ್ಲಿ ಸಾಮಾನ್ಯವಾಗಿ ಮದುವೆ ವಧುವಿನ ಮನೆಯಲ್ಲೇ ಆಗುತ್ತದೆ. ಮದುವೆಯ ಎಲ್ಲಾ ಖರ್ಚುಗಳನ್ನು ವಧುವಿನ ತಂದೆ ತಾಯಿಗಳೇ ನಿರ್ವಹಿಸುವುದು. ಮದುವೆಯ ಹಿಂದಿನ ದಿನ, ಮದುವೆಯ ದಿನ ಎರಡೂ ಕಡೆಯ ನೆಂಟರಿಷ್ಟರಿಗೆ ವಧುವಿನ ತಂದೆ ತಾಯಿಗಳೇ ಅತಿಥಿ ಸತ್ಕಾರ ನೀಡಬೇಕು. ಊಟ ಉಪಚಾರ ಮಾಡಬೇಕು.

ಸಾಮಾನ್ಯವಾಗಿ ಮೊದಲ ಹೆರಿಗೆ ಹುಡುಗಿಯ ತಾಯಿಯ ಮನೆಯಲ್ಲೇ ಆಗುತ್ತದೆ. ವಧುವಿನ ತಂದೆ ತಾಯಿಗಳ ಆರ್ಥಿಕ ಸ್ಥಿತಿ ಹೇಗೇ ಇರಲಿ 7 ಅಥವಾ 9ನೇ ತಿಂಗಳಲ್ಲಿ ಗರ್ಭಿಣಿ ತವರು ಮನೆಗೆ ಕಳಿಸಲ್ಪಡುತ್ತಾಳೆ. ತವರು ಮನೆಯಲ್ಲಿ ಸೀಮಂತ, ಇದನ್ನು ಬಯಕೆ ಎಂದು

ಹೇಳುತ್ತಾರೆ. ಆಗ ಆಭರಣ, ಹೊಸ ಸೀರೆ-ರವಿಕೆ, ಹೂವು ಇತ್ಯಾದಿಗಳನ್ನು ಗಂಡನು ಕೊಡುತ್ತಾನೆ. ಒಂಬತ್ತು ತರದ ಅಡುಗೆ-ತಿಂಡಿಗಳನ್ನು ತಯಾರಿಸಿ ಗುರುಕಾರರ ಸಮ್ಮುಖದಲ್ಲಿ ಬಂಧು ಬಳಗದವರಿಗೆ ಊತಣ ನೀಡಲಾಗುತ್ತದೆ. ಹೆರಿಗೆ ಆದನಂತರ ಬಂಧು ಬಳಗಕ್ಕೆ, ನೆರೆ ಕೆರೆಯುವರಿಗೆ ಸಿಹಿ ಹಂಚುತ್ತಾರೆ. 12ನೇ ದಿನ ಶುದ್ಧ ಪುಣ್ಯಾರ್ಚನೆಯೂ ನಡೆಯುತ್ತದೆ. ಆ ದಿನ ನೆಂಟರಿಷ್ಟರಿಗೆ, ಬಂಧು ಬಳಗಕ್ಕೆ ಊತಣ ಇರುತ್ತದೆ. ಈ ಸಂದರ್ಭಗಳಲ್ಲೆಲ್ಲಾ ಮದ್ಯ ಮಾಂಸಗಳು ವರ್ಜ್ಯ.

ಗಂಡುಮಗುವಾದರೆ ಮೊದಲು ಕೂದಲು ಕತ್ತರಿಸುವ ಚೌಲದ ಪದ್ಧತಿಯೂ ಇವರಲ್ಲಿ ಇದೆ ಸಾಮಾನ್ಯವಾಗಿ ಇದು ಪವಿತ್ರ ಸ್ಥಾನದಲ್ಲಿ ನಡೆಯುತ್ತದೆ.. ಬೆಂಗರೆಯುವರಿಗೆ ನೇತ್ರಾವತಿ, ಗುರುಪುರ ಹೊಳೆಗಳ ಸಂಗಮಸ್ಥಾನ ಹತ್ತಿರದಲ್ಲೇ ಇರುವುದರಿಂದ ಚೌಲ ಸಾಮಾನ್ಯವಾಗಿ ಅಲ್ಲೇ ನಡೆಯುತ್ತದೆ. ಸಾಮಾನ್ಯವಾಗಿ ಹುಡುಗನಿಗೆ ಒಂದು ವರ್ಷವಾದ ನಂತರ ಚೌಲ ಮಾಡುತ್ತಾರೆ. ಈ ಸಂದರ್ಭದಲ್ಲಿ ನಾಪಿತನು ಅಕ್ಕಿ ತೆಂಗಿನ ಕಾಯಿಗಳಲ್ಲಿ ಗಣಪತಿಯನ್ನು ಪೂಜಿಸಿ ಚೌಲ ಕಾರ್ಯಕ್ಕೆ ಅಡ್ಡಿ ಆಗದಿರಲೆಂದು ಪ್ರಾರ್ಥಿಸಿ ಕೂದಲು ತೆಗೆಯುತ್ತಾನೆ. ಹೂ-ಎಲೆ-ಅಡಿಕೆ ಬಾಳೆ ಹಣ್ಣು, ತೆಂಗಿನ ಕಾಯಿಗಳನ್ನು ಗಣೇಶನ ಫೋಟೋ ಮುಂದೆ ಇಟ್ಟು ಪೂಜಿಸುವುದೂ ಉಂಟು. ಕೂದಲು ತೆಗೆದ ನಂತರ ನಾಪಿತನು ಮಗುವನ್ನು ಸುಖ ಸಮೃದ್ಧಿಗಾಗಿ ಹರಸುತ್ತಾನೆ. ಈತನ ಈ ಕಾರ್ಯಕ್ಕೆ ಕಾಣಿಕೆಯಾಗಿ

ಹಣ–ಬಟ್ಟೆ ಮುಂತಾದವುಗಳನ್ನು ಹೆತ್ತವರು ಶಕ್ತ್ಯಾನುಸಾರ ಕೊಡುತ್ತಾರೆ.

ಶವ ಸಂಸ್ಕಾರದ ಪದ್ಧತಿಗಳು

ಮೊಗವೀರರಲ್ಲಿ ಮರಣ ಕಾಲದಲ್ಲಿ ಶವ ಸಂಸ್ಕಾರ ಕಾಲದಲ್ಲಿ ಮತ್ತು ನಂತರ ಆಚರಿಸುವ ಪದ್ಧತಿಗಳು ಕುತೂಹಲಕಾರಿ. ಪ್ರಾಣ ಹೋಗುವ ಕಾಲದಲ್ಲಿ ಮರಣಾಸನ್ನ ವ್ಯಕ್ತಿಯ ಹಿರಿಯ ಮಗ ಕುಟುಂಬದ ಎಲ್ಲಾ ಸದಸ್ಯರು ವ್ಯಕ್ತಿಯ ಬಾಯಿಗೆ ಯಾವುದಾದರೂ ಚಿನ್ನದ ಆಭರಣದ ಮೂಲಕ ಬಾಯಿಗೆ ತೀರ್ಥ ಬಿಡುತ್ತಾರೆ. ಸತ್ತ ಒಡನೆ ಸಂಬಂಧಿಕರಿಗೆ ಮತ್ತು ಗುರುಕಾರರಿಗೆ ಸುದ್ದಿ ಮುಟ್ಟಿಸುತ್ತಾರೆ. ಬರಬೇಕಾದ ವರೆಲ್ಲಾ ಬಂದ ನಂತರ ಹೆಣವನ್ನು ಬಿಸಿ ನೀರಿನಲ್ಲಿ ಸ್ನಾನ ಮಾಡಿಸಿ ಅದಕ್ಕೆ ಹೊಸ ಬಟ್ಟೆ ತೊಡಿಸಿ ದಹನ ಸ್ಥಾನಕ್ಕೆ ತೆಗೆದುಕೊಂಡು ಹೋಗಲು ಅನುಕೂಲ ವಾಗುವಂತೆ ಕಟ್ಟುತ್ತಾರೆ. ಗುರುಕಾರರ ಬಂಧುಗಳ ಹಾಗೂ ಗ್ರಾಮದ ಹಿರಿಯರ ಸಮ್ಮುಖದಲ್ಲೇ ಮೃತನ ಸಾಲ, ಹೊಣೆಗಾರಿಕೆ, ವಿವಾದಗಳೇನಾದರೂ ಇದ್ದರೆ ಬಗೆಹರಿಸಲ್ಪಡುತ್ತದೆ. ಸತ್ತವನ ಕುಟುಂಬದವರು ಆತನ ಸಾಲ, ಹೊಣೆಗಾರಿಕೆಗಳಿಗೆ ಜವಾಬ್ದಾರ ರಾಗುತ್ತಾರೆ.ಒಂದು ವೇಳೆ ಸತ್ತವನ ಉತ್ತರಾಧಿಕಾರಿಗಳು ಎಳೆಯರಾಗಿದ್ದರೆ ಅಲ್ಲಿ ಸೇರಿದವರು ಅವರಿಂದ ತಾವು ಪ್ರಾಯಕ್ಕೆ ಬಂದ ನಂತರ ಸಾಲ ತೀರಿಸುವುದಾಗಿ ವಚನ ಪಡೆಯುತ್ತಾರೆ. ಇದೆಲ್ಲಾ ಆದನಂತರ ಮನೆ ಮಂದಿ ಯೆಲ್ಲಾ ಹೆಣದ ತಲೆಯ ಮೇಲೆ ಕೈ ಇಟ್ಟು

"ಗೌರವಾನ್ವಿತ" ಗುರುಕಾರರ ಮುಂದೆ ಈ ಮೃತ ಶರೀರವನ್ನು ನಿಮಗೆ ಬಿಟ್ಟುಕೊಟ್ಟಿದ್ದೇವೆ ಎಂದು ಘೋಷಿಸುತ್ತಾರೆ. ನಂತರ ಶವವು ಗ್ರಾಮಸ್ಥರ ವಶಕ್ಕೆ ಒಪ್ಪಿಸಲ್ಪಡುತ್ತದೆ. ಬಂಧುಬಳಗದವರು ತಯಾರಿಸಿದ 'ಚಟ್ಟ' ದಲ್ಲಿ ಶವವನ್ನು ಇರಿಸಿ ದಹನ ಸ್ಥಾನಕ್ಕೆ ತೆಗೆದುಕೊಂಡು ಹೋಗುತ್ತಾ. ಶವಯಾತ್ರೆಯಲ್ಲಿ ಭಜನೆಗಳನ್ನು ಹಾಡುತ್ತಾರೆ. ಪುರಿ ಮತ್ತು ಪುಡಿಗಾಸು ಗಳನ್ನು ದಾರಿ ಉದ್ದಕ್ಕೂ ಶವದ ಮೇಲೆ ಎಸೆಯು ತ್ತಾರೆ. ಸಮುದ್ರ ದಂಡೆಯಲ್ಲೇ ಶವದಹನ. ಹಿರಿಯ ಮಗ ಅಥವಾ ಸಹೋದರರು ಮನೆಯಿಂದಲೇ ತೆಗೆದು ಕೊಂಡು ಹೋದ ಬೆಂಕಿ ಚಿತೆಗೆ ತಗಲಿಸುತ್ತಾರೆ.

ಹೆಣವನ್ನು ಮನೆಯಿಂದ ಹೊರಗೆ ತೆಗೆದುಕೊಂಡು ಹೋಗುವಾಗ ಅದರ ತಲೆ ಮನೆ ಕಡೆಗೂ, ಕಾಲು ಹೊರಗಡೆಗೂ ಇರುವಂತೆ ನೋಡಿಕೊಳ್ಳುತ್ತಾರೆ. ಮನೆ ಯಲ್ಲಿನ ಎಲ್ಲಾ ಪಾತ್ರೆ ಪರಡಿ, ಕುರ್ಚಿ ಮೇಜುಗಳನ್ನು ಕೂಡ ಮನೆಯಲ್ಲಿ ಒಬ್ಬನ ಸಾವು ಸಂಭವಿಸಿದೆ ಎಂಬುದರ ಸಂಕೇತವಾಗಿ ಬೋರಲು ಹಾಕುತ್ತಾರೆ.

ವಿವಾಹಿತ ವ್ಯಕ್ತಿ ಸತ್ತರೆ ಆತನ ಹೆಂಡತಿ ಸ್ನಾನ ಮಾಡಿ ಶವದ ಎಡಬದಿಗೆ ಕುಳಿತಿರಬೇಕು. ಶವಕ್ಕೆ ಸ್ನಾನವಾದ ನಂತರ ಕೆಲವು ವಿಧಿ ಪೂಜೆಗಳನ್ನು ನಡೆಸುತ್ತಾರೆ. ಮೃತನ ಹೆಂಡತಿಗೆ ಹೊಸ ಸೀರೆಯುಡಿಸಿ ಮಲ್ಲಿಗೆ ಮುಡಿಸಿ ಬಳೆ ತೊಡಿಸುತ್ತಾರೆ. ಮಂಗಳ ಸೂತ್ರವೂ ಅವಳ ಕುತ್ತಿಗೆಯಲ್ಲಿ ಇರಬೇಕು. ಚಿತೆಗೆ ಅಗ್ನಿ ಸ್ಪರ್ಶ ಮಾಡುವಾಗ ಆಕೆಯ ಬಳೆ, ಆಭರಣ,

ಮಂಗಳ ಸೂತ್ರ ಇತ್ಯಾದಿಗಳನ್ನು ಗುರುಕಾರರ ಕಡೆಯು ಯಾವಳಾದರೂ ಒಬ್ಬ ವಿಧವೆ ತೆಗೆಯುತ್ತಾಳೆ. ಶವ ಸಂಸ್ಕಾರದ ಖರ್ಚು ಮೃತನ ಮಕ್ಕಳು ಬಡವರಾಗಿದ್ದರೆ ಅವರ ಬಳಿ ಹಣವಿಲ್ಲದಿದ್ದರೆ ಗ್ರಾಮದ ವಿಮಾ ನಿಧಿ ಯಿಂದ ನಿರ್ವಹಿಸುತ್ತದೆ.

ಶೋಕ 13 ದಿನಗಳವರೆಗೆ ಇರುತ್ತದೆ. 3ನೇ ದಿನ ಶವ ಸುಟ್ಟ ಜಾಗದಲ್ಲಿ ಉಳಿದ ಎಲುಬು ಚೂರುಗಳನ್ನು ಚಿತೆಗೆ ಬೆಂಕಿ ಇಟ್ಟವರು ಆಯ್ದುಕೊಳ್ಳುತ್ತಾರೆ. ಅದನ್ನು ಬಾಳೆ ಎಲೆಯಲ್ಲಿ ಕಟ್ಟಿ ಸಮುದ್ರಕ್ಕೆ ಎಸೆಯುತ್ತಾರೆ. ಗುರುಕಾರರು ಮೃತನ ಮನೆಯವರನ್ನು "ತಿಥಿ, ಕಾರ್ಯ ನೀವೇ ನಡೆಸುತ್ತೀರಾ? ಅಥವಾ ಗ್ರಾಮದಿಂದೇನಾದರೂ ಸಹಾಯ ಬೇಕಾ?' ಎಂದು ಕೇಳುತ್ತಾರೆ. ಮೃತರ ಮನೆಯವರೇ ತಿಥಿ, ಕಾರ್ಯ ಮಾಡುತ್ತೇವೆ ಎಂದರೆ ಅವರು ಗ್ರಾಮ ನಿಧಿಗೆ 15 ರೂ. ಕೊಡಬೇಕಾಗುತ್ತದೆ. ಒಂದು ವೇಳೆ ಅವರು ಗ್ರಾಮಸ್ಥರಿಗೆ ತಿಥಿ ಕಾರ್ಯದ ಹೊಣೆ ವಹಿಸಿದರೆ 13ನೇ ದಿನದ ಕಾರ್ಯ ಊರಲ್ಲಿ ವಂತಿಕೆ ಎತ್ತಿ ಗ್ರಾಮ ನಿಧಿಯಿಂದಲೂ ಸ್ವಲ್ಪ ಹಣ ಹಾಕಿ ನಡೆಸಲ್ಪಡುತ್ತದೆ.

13ನೇ ದಿನದ ಕಾರ್ಯದಂದು ಪ್ರತಿಯೊಂದು ಮನೆಯಿಂದಲೂ ಇಬ್ಬರಂತೆ ಊಟಕ್ಕೆ ಕರೆಯಲ್ಪಡು ತ್ತಾರೆ. ಆ ದಿನ ರಾತ್ರಿ ಮೃತನ ಆತ್ಮವನ್ನು ಅವನ ಹಿಂದಿನ ಮನೆಯೊಳಗೆ ಕರೆದು ಈಗಾಗಲೇ ಸತ್ತಿರುವ ಅವನ ಹಿರಿಯರ ಆತ್ಮಗಳ ಜೊತೆಗೆ ಸೇರಿಕೊಳ್ಳಬೇಕೆಂದು ಪ್ರಾರ್ಥಿಸುತ್ತಾರೆ. 5 ಕುಡಿ ಬಾಳೆಯ ಎಲೆಗಳಲ್ಲಿ ಆ

ದಿನ ಮಾಡಿದ ಅಡಿಗೆ ಪದಾರ್ಥಗಳನ್ನೆಲ್ಲಾ ಎಡೆ ಮಾಡಿ ಪೂಜಿಸುತ್ತಾರೆ. ಗುರುಕಾರರ ಜೊತೆಗೆ ಗ್ರಾಮಸ್ಥರು ಸೇರಿ ಮೃತನ ಆತ್ಮಕ್ಕೆ ಶಾಂತಿ ದೊರೆಯಬೇಕೆಂದು ಪ್ರಾರ್ಥಿಸುತ್ತಾರೆ. ಮೃತನ ಆತ್ಮವು ಒಳಗೆ ಬರುವ ಮೊದಲು ಕೈ ಕಾಲು ತೊಳೆದುಕೊಳ್ಳಲು ಬಯಸಿದರೆ ಬೇಕಾಗಬಹುದೆಂದು ಮನೆಯ ಮೆಟ್ಟಲಿನ ಬಳಿ ಒಂದು ದೊಡ್ಡ ಪಾತ್ರೆಯಲ್ಲಿ ನೀರು ಇರಿಸುತ್ತಾರೆ. 13ನೇ ದಿನ ಸತ್ತವನಿಗೆ ಪಿಂಡ ಹಾಕುವ ಕಾರ್ಯವು ಸಮುದ್ರದ ಬದಿಯಲ್ಲಿ ನಡೆಯುತ್ತದೆ. ಇಲ್ಲಿ ಮೃತನ ಉತ್ತರಾಧಿ ಕಾರಿಗಳು ಬ್ರಾಹ್ಮಣ ಪುರೋಹಿತರ ನಿರ್ದೇಶನದಂತೆ ಹಲವಾರು ಕ್ರಿಯೆಗಳನ್ನು ಮಾಡುತ್ತಾರೆ.

ಈ ಮೀನುಗಾರರು ಮೀನುಗಾರಿಕೆಗೆ ಹೋಗುವ ಮೊದಲು ಆಚರಿಸುವ ಕೆಲವು ಪದ್ಧತಿಗಳು ವಿಚಿತ್ರ ವಾಗಿವೆ. ಇಲ್ಲಿನ ಪ್ರತಿಯೊಬ್ಬನ ಅಸ್ತಿತ್ವವು ಅವನ ಉದ್ಯೋಗವನ್ನೇ ಅವಲಂಬಿಸಿದೆ. ಅವರ ಉದ್ಯೋಗವೇ ಅವರ ದೇವರು. ಬದುಕೇ ಮೊದಲು. ಉಳಿದುದು ನಂತರ. ಹಾಗಾಗಿ ಇಲ್ಲಿನ ಪ್ರತಿಯೊಂದು ಗಂಡು ಹೆಣ್ಣು ಕೂಡಾ ಅವರವರ ಭಕ್ತಿ ಶ್ರದ್ಧೆಗೆ ಅನುಸಾರ ವಾಗಿ ತಮ್ಮದೇ ರೀತಿಯಲ್ಲಿ ತಮಗಿಷ್ಟ ಬಂದ ದೇವ ರನ್ನು ಪೂಜಿಸುತ್ತಾರೆ. ಅವರು ಮೀನು ಹಿಡಿಯಲು ಹೊರಡುವ ಮೊದಲು ದೇವರನ್ನು ಪೂಜಿಸುವ ವಿಧಾನ ಅವರದ್ದೇ ಆಗಿದೆ. ಇಲ್ಲಿ ಎರಡು ತರದ ಪೂಜೆ ಇದೆ. ಒಂದು ಸಾಂಧರ್ಭಿಕವಾದುದು, ಮತ್ತೊಂದು ದೈನಿಕ ಈ ಸಾಂಧರ್ಭಿಕ ಪೂಜೆಯು ದೈನಿಕ ಪೂಜೆಗಿಂತ ಹೆಚ್ಚು ವಿಸ್ತಾರವಾದುದು. ಮತ್ತು ಕ್ರಮಬದ್ಧವಾದುದೂ

ಆಗಿರುತ್ತದೆ. ಮಳೆಗಾಲದ ನಂತರ ಮೀನು ಬೇಟೆಗೆ ಇಳಿಯುವ ಮೊದಲ ದಿನದ ಪೂಜೆಯು ಸಾಂಧರ್ಭಿಕ ಪೂಜೆ. ಆಗ ನಡೆಯುವ ಪೂಜೆಯು ಹೀಗಿರುತ್ತದೆ.

ಸೂರ್ಯೋದಯಕ್ಕೆ ಮೊದಲೇ ಪೂರ್ವ ನಿಶ್ಚಿತ ದಿನದಂದು ಎಲ್ಲಾ ಗುರುಕಾರರು ಮೀನುಗಾರರು ಸಮುದ್ರ ದಂಡೆಯಲ್ಲಿ ಸೇರುತ್ತಾರೆ. ಬಾಳೆಹಣ್ಣು, ತೆಂಗಿನಕಾಯಿ, ಕುಸುಬಲಕ್ಕಿ, ವೀಳ್ಯದೆಲೆ, ಅಡಿಕೆ, ಅನ್ನ, ಅರಸಿನ ಪುಡಿ, ಒಂದು ಮಡಿಕೆ ತುಂಬಾ ಸುಣ್ಣ ಅರಸಿನ ಪುಡಿ ಬೆರೆಸಿ ಮಾಡಿದ ಕೆಂಪು ನೀರು, (ಕುರಿ ನೀರು) ಮುಂತಾದುವುಗಳನ್ನು ಸಮುದ್ರದಂಡೆಗೆ ಒಯ್ಯುತ್ತಾರೆ. ಸೇರಿದ್ದವರಲ್ಲಿ ಹಿರಿಯ–ಸಾಮಾನ್ಯವಾಗಿ ಗುರುಕಾರರಲ್ಲಿ ಒಬ್ಬ–ಪೂಜೆ ಮಾಡುತ್ತಾನೆ. ಸಮುದ್ರ ಮಾತೆಯು ಆರಾಧಿಸಲ್ಪಡುತ್ತಾಳೆ. ಎಡೆ ಬಡಿಸಿ, ಕುರಿ ನೀರು ಸುರಿದು ಪೂಜೆ ಮಾಡುತ್ತಾರೆ. ದೋಣಿಗಳನ್ನು ಪೂಜಿಸುತ್ತಾರೆ. ಪೂಜೆಯ ನಂತರ ದೋಣಿಗಳನ್ನು ನೀರಿಗೆ ದೂಡುತ್ತಾರೆ. ದೋಣಿಗಳು ಮೀನು ಹಿಡಿಯುವ ಪ್ರದೇಶ ತಲುಪಿದ ನಂತರ ದೋಣಿಯಲ್ಲೇ ಗಂಗಾ ದೇವಿಯ ಪೂಜೆ, ಪ್ರಾರ್ಥನೆ ನಡೆಯುತ್ತದೆ. ತೆಂಗಿನ ಕಾಯಿಗಳನ್ನು ದೋಣಿಯಲ್ಲೇ ಒಡೆದು ಒಂದು ಹೋಳನ್ನು ಸಮುದ್ರಕ್ಕೆ ಎಸೆದು ಇನ್ನೊಂದು ಹೋಳನ್ನು ದೋಣಿಯಲ್ಲಿರುವವರು ಹಂಚಿಕೊಂಡು ತಿನ್ನುತ್ತಾರೆ. ಹೀಗೆ ಇವರು ತಮ್ಮ ಮೀನುಗಾರಿಕೆ ಪ್ರಾರಂಭಿಸುತ್ತಾರೆ.

ದಿನವೂ ಮೀನು ಹಿಡಿಯಲು ಹೋಗುವ ಮೊದಲು ಪೂಜೆ ನಡೆಯುತ್ತದೆ. ಇದು ಮನೆಯಲ್ಲಿ

ಬೆಳಗಿನ ಜಾವದ ನಾಲ್ಕು ಗಂಟೆಗೆ ಎದ್ದು ಪ್ರಾತಃ ವಿಧಿಗಳನ್ನು ತೀರಿಸಿ ಮನೆಯಲ್ಲಿರುವ ವಿಷ್ಣು, ವೆಂಕಟೇಶ್ವರ, ಆಂಜನೇಯ ಮುಂತಾದ ದೇವರುಗಳ ಫೋಟೋಗಳಿಗೆ ವಂದಿಸಿ ಮಧ್ಯಾಹ್ನದ ಊಟಕ್ಕೆ ಬುತ್ತಿ ಕಟ್ಟಿಕೊಂಡು ಮೀನು ಬೇಟೆಗೆ ಹೊರಡುತ್ತಾರೆ.

ಬೆಂಗರೆಯ ಜನ ತಮ್ಮ ವೃತ್ತಿ ಹಾಗೂ ಜೀವನ ವಿಧಾನಕ್ಕೆ ಬದ್ಧರಾಗಿದ್ದಾರೆ. ಅವರ ಮೀನುಗಾರಿಕೆ ಉದ್ಯೋಗವು ತಲೆಮೊರೆಯಿಂದ ಬಂದುದು. ಬೇರೆಡೆಯ ಜನರಂತೆ ಅವರು ಉದ್ಯೋಗಕ್ಕಾಗಿ ಚಿಂತಿತರಾಗಿಲ್ಲ. ಅವರ ಜೀವನಾಧಾರವಾದ ಪ್ರಕೃತಿ ಮಾತೆ ಅಂದರೆ ಸಮುದ್ರ ಯಾವುದೇ ಫ್ಯಾಕ್ಟರಿಯೂ ಕೊಡಲಾರದಷ್ಟು ಹೆಚ್ಚಿನ ಸಂಖ್ಯೆಯ ಜನರಿಗೆ ಉದ್ಯೋಗ ಕೊಡಬಲ್ಲದು. ಉದ್ಯೋಗವಿಲ್ಲದೆ ಬಡತನ ಬಂತು ಎಂಬ ಮಾತೇ ಇಲ್ಲಿ ಇಲ್ಲ. ಬೆಂಗರೆಯಲ್ಲಿ ಇರುವವರು ಯಾರಾದರು ಹೊಟ್ಟೆ ಬಟ್ಟೆಗೆ ಸಂಪಾದಿಸುತ್ತಿಲ್ಲ ಎಂದಾದರೆ ಅದು ಉದ್ಯೋಗವಿಲ್ಲದೆ ಎಂದಲ್ಲ ; ಅದಕ್ಕೆ ಕಾರಣ ಬೇರೆ. ಸೋಮಾರಿತನವಿರಬಹುದು, ಅನಾರೋಗ್ಯವಿರಬಹುದು. ಇನ್ನೇನಾದರೂ ಇರಬಹುದು. ನಿರುದ್ಯೋಗವಂತೂ ಅಲ್ಲ. ಈಚಿನ ವರ್ಷಗಳಲ್ಲಿ ಸರ್ಕಾರ ಅವರ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಮೀನುಗಾರಿಕೆಯ ಸಲಕರಣೆಗಳನ್ನು ಕೊಂಡುಕೊಳ್ಳಲು ಸಹಕಾರಿ ಸಂಘಗಳ ಮೂಲಕ ಮುಂಗಡ ಹಣ ನೀಡಿದೆ. ಕೆಲವರಿಗೆ ಯಾಂತ್ರಿಕ ದೋಣಿ ಕೊಳ್ಳಲು ಸಹಾಯವನ್ನು ನೀಡಿದೆ. ಬೆಂಗರೆಯಿಂದ ಹೆದ್ದಾರಿಯವರೆಗೆ ರಸ್ತೆ ನಿರ್ಮಾಣವಾಗಿದೆ. ಇದರ ಉದ್ದೇಶ ಬೆಂಗರೆಯವರಿಗೆ ತಮ್ಮ

ವ್ಯಾಪಾರೋದ್ಯಮದಲ್ಲಿ ಅಭಿವೃದ್ಧಿ ಸಾಧಿಸಲು ಸಹಾಯ ಮಾಡುವುದೇ ಆಗಿದೆ. ಕೆಲವರ ಮಕ್ಕಳು ಉನ್ನತ ಶಿಕ್ಷಣ ಪಡೆದು ಸರ್ಕಾರಿ ಹಾಗೂ ಖಾಸಗೀ ಸಂಸ್ಥೆಗಳಲ್ಲಿ ಉದ್ಯೋಗದಲ್ಲಿದ್ದಾರೆ. ಇಷ್ಟೆಲ್ಲಾ ಆದರೂ ಅವರಿಗೆ ಇನ್ನೂ ಕೆಲವು ಸೌಲಭ್ಯಗಳು ಬೇಕಾಗಿವೆ. ಉದಾ : 10 ಅಥವಾ 20 ಹಾಸಿಗೆಯುಳ್ಳ ಆಸ್ಪತ್ರೆ, ಚರಂಡಿ ವ್ಯವಸ್ಥೆ, ಎಲ್ಲಕ್ಕಿಂತ ಹೆಚ್ಚಾಗಿ ಸಮುದ್ರ ಹಾಗೂ ನದಿಯಿಂದ ಉಂಟಾಗುವ ಭೂ ಸವೆತವನ್ನು ತಪ್ಪಿಸುವುದು. ಈ ಗ್ರಾಮ ದೇಶದ ಸಂಪತ್ತು ಹಾಗೂ ಹೊಣೆಗಾರಿಕೆ. ಮೀನುಗಾರಿಕೆ ರಾಷ್ಟ್ರೀಯ ಆದಾಯವನ್ನು ಹೆಚ್ಚಿಸುವ ಉದ್ಯಮ.

ಇಲ್ಲಿರುವ ವ್ಯಕ್ತಿಗಳ ಕುಟುಂಬಗಳ ಹಾಗೂ ಜಾತಿಗಳ ನಡುವಿನ ಸಾಮಾಜಿಕ ಸಂಬಂಧ ಒಂದು ಮಾದರಿಯಾಗಿದೆ. ಇಲ್ಲಿ ಆರು ಜಾತಿಯ ಜನರಿದ್ದರೂ ಎಂದೂ ಜಾತಿ ದ್ವೇಷ ಕಾಣಿಸಲಿಲ್ಲ. ಗ್ರಾಮದ ಶಾಂತಿ ಕದಡಲಿಲ್ಲ. ಗುಂಪು ಕಲಹಗಳಾಗಲಿ, ಜಾತಿ ಕಲಹಗಳಾಗಲಿ ನಡೆಯಲಿಲ್ಲ. ಬಹುಶಃ ಇದು ಅವರು ದೈನಿಕ ಕೆಲಸಗಳಲ್ಲಿ ತೊಡಗಿರುವುದರಿಂದ ಇದ್ದರೂ ಇರಬಹುದು. ಹಲವಾರು ವಿಧದಲ್ಲಿ ಇವರಲ್ಲಿ ಸಮಾನತೆಯೂ ಇದೆ. ಎಲ್ಲರೂ ಒಂದೇ ಉದ್ಯೋಗ ಮಾಡುತ್ತಾರೆ. ಜಾತಿ, ಅಂತಸ್ತುಗಳ ಭೇದವಿಲ್ಲದೆ ಇವರೆಲ್ಲಾ ಒಂದೇ ತರದ ಆಹಾರ ಸೇವಿಸುತ್ತಾರೆ. ಎಲ್ಲರ ಮನೆಗಳು ಒಂದೇ ರೀತಿ ಇವೆ. ಹೀಗಾಗಿ ಮೇಲು ಕೀಳುಗಳ ಕಲ್ಪನೆಗೆ ಅವಕಾಶವೇ ಇಲ್ಲವಾಗಿದೆ. ಮನೆಯಲ್ಲಿ ಉರ್ದು ಮಾತಾಡುವ ಕೆಲವು ಕುಟುಂಬಗಳನ್ನು ಬಿಟ್ಟರೆ ಉಳಿದವ

ರೆಲ್ಲಾ ತುಳು ಮಾತಾಡುತ್ತಾರೆ. ಅವರ ಕೆಲಸದ ವೇಳೆಗಳಲ್ಲಿ, ಉಡುಗೆ ತೊಡುಗೆಗಳಲ್ಲಿ ಸಮಾನತೆ ಇದೆ. ಇವರ ಹೆಂಗಸರು ಮನೆ ಕೆಲಸದ ಜೊತೆಗೆ ಮೀನು ಮಾರುವ ಕಾರ್ಯವನ್ನೂ ಮಾಡುತ್ತಾರೆ. ಬಿಡುವಿನ ಕಾಲದಲ್ಲಿ ಹೆಂಗಸರು ಬಲೆ ನೇಯುವುದಕ್ಕೆ, ಬಲೆ ಸರಿಪಡಿಸುವುದಕ್ಕೆ ಗಂಡಸರಿಗೆ ಸಹಾಯ ಮಾಡುತ್ತಾರೆ. ವಿಶೇಷವಾಗಿ ಮದುವೆ ಹಾಗೂ ವಿಶೇಷ ಸಮಾರಂಭಗಳ ಸಂಧರ್ಭಗಳಲ್ಲಿ ಇವರು ತಮ್ಮ ಒಗ್ಗಟ್ಟಿಗೆ ಮಾದರಿಯಾಗುತ್ತಾರೆ. ಎಲ್ಲರೂ ಸೇರಿ ತಮ್ಮ ಜಾತಿ, ಸಂಸ್ಕೃತಿಗಳ ಭೇದವನ್ನು ಮರೆತು ಮದುವೆ ಮುಂತಾದ ಸಮಾರಂಭಗಳ ಯಶಸ್ಸಿಗೆ ಶ್ರಮಿಸುತ್ತಾರೆ.

ಈ ಗ್ರಾಮದ ಬರೆಯಬಹುದಾದ ಕೆಲವು ಪ್ರಮುಖ ಸಂಗತಿಗಳಲ್ಲಿ ಮಹತ್ವವಾದವುಗಳೆಂದರೆ, ಇಲ್ಲಿನ ಜನರ ಒಗ್ಗಟ್ಟು ಮತ್ತು ಗ್ರಾಮದಲ್ಲಿ ಶಾಂತಿ ಪರಿಪಾಲನೆ. ಸರ್ಕಾರದ ಮೇಲೆ ಹೆಚ್ಚು ಅವಲಂಬನೆ ಇಲ್ಲದೆ ಸಮಾನವಾದ ಉದ್ಯೋಗವನ್ನು ಅವಲಂಬಿಸಿರುವುದು. ಇವರು ಗುರುಕಾರರ ಸಹಾಯದಿಂದ ತಮ್ಮೆಲ್ಲಾ ವಿವಾದಗಳು ಕೋರ್ಟು ಕಛೇರಿಗೆ ಹೋಗದಂತೆ ಮಾಡಿಕೊಳ್ಳುವುದು, ವಿವಾದಗಳನ್ನು ಬಗೆಹರಿಸುವ ವಿಧಾನ ಜಾತಿ ಬಾಂಧವರಲ್ಲಿ ಹೊಂದಿರುವ ಹತೋಟಿಯ ಶಿಸ್ತು, ವಿವಾದಗಳಲ್ಲಿ ನೀಡುವ ನಿಷ್ಪಕ್ಷಪಾತ ತೀರ್ಪುಗಳ ಕಡೆಗೆ ಯಾರೂ ಬೆರಳುಮಾಡಿ ತೋರಿಸುವಂತಿಲ್ಲ. ಇವರು ಅಳವಡಿಸಿಕೊಂಡಿರುವ ಗ್ರಾಮ ವಿಮಾ ಯೋಜನೆ ಹಾಗೂ ಅದರ ಕಷ್ಟ ಕಾಲದ ಉಪಯೋಗ ಒಂದು ವಿಶಿಷ್ಟ ಸಂಗತಿ. ಇದು ಪ್ರತಿ

ಗ್ರಾಮದಲ್ಲಿಯೂ ಅನುಸರಿಸಬೇಕಾದ ಮಾದರಿ ವಿಧಾನ.

ಈ ಗ್ರಾಮಸ್ಥರಲ್ಲಿರುವ ಸಾಮಾಜಿಕ ಸಂಬಂಧ ತುಂಬಾ ಮಧುರ. ಜಗಳಗಳು ಬಹಳ ವಿರಳ. ಖಾಯಂ ಆಗಿ ನಿರುದ್ಯೋಗವಂತೂ ಇಲ್ಲಿ ಇಲ್ಲವೇ ಇಲ್ಲ. ಯುವಕರಾಗಲೀ, ಮುದುಕರಾಗಲಿ ಇನ್ನೊಬ್ಬರ ಮೇಲೆ ಹೆಚ್ಚು ಭಾರ ಬೀಳದೆ ತಮ್ಮ ಅನ್ನ ತಾವು ಸಂಪಾದಿಸಿ ಕೊಳ್ಳುತ್ತಾರೆ. ಅವರ ಉಡುಗೆಯೂ ಸರಳ. ಆಹಾರವೂ ಸರಳ. ಅವರು ಹತ್ತಿಯ ಉಡುಗೆಯನ್ನೇ ತೊಡುವರು. ರೇಷ್ಮೆ ಅವರಿಗೆ ತಿಳಿಯದು. ಕುಸುಬಲಕ್ಕಿಯ ಗಂಜಿ ಮತ್ತು ಮೀನು ಇವರ ಆಹಾರ. ಗಂಡಸರ ಮಧ್ಯಾಹ್ನದ ಊಟ ಕಡಲಿನಲ್ಲೇ. ಅಲ್ಲಿ ಇವರು ಉಣ್ಣುವುದು ಮೀನಿನ ಪಳದ್ಯ ಮತ್ತು ಅನ್ನ. ಸಂಜೆಯ ಊಟಕ್ಕೂ ಮೀನು ಇರುತ್ತದೆ. ಇವರು ಕುಡಿಯುವುದೂ ಉಂಟು. ಹೆಚ್ಚಿನ ಗಂಡಸರು ಕಳ್ಳು ಕುಡಿಯುತ್ತಾರೆ. ಇವರಲ್ಲಿ ಎಲ್ಲರೂ ಮಾಂಸಾಹಾರಿ ಗಳೇ ಸಸ್ಯಾಹಾರಿಗಳು ಇದ್ದರೆ ಅದು ಅಪವಾದ. ಒಟ್ಟಾರೆ ಇವರದ್ದು ಒಂದು ವಿಧದ ಬದ್ಧ ಜೀವನ.

ರಕ್ಷಣೆಯ ದೃಷ್ಟಿಯಿಂದ ರಾಜ್ಯದ ಬೇರೆ ಯಾವುದೇ ಪ್ರದೇಶದ ಜನರಿಗಿಂತ ಬೆಂಗರೆಯ ಜನ ಹೆಚ್ಚು ಸುರಕ್ಷಿತರು. ಇಲ್ಲಿ ಕಳ್ಳತನ ದರೋಡೆಗಳು ಇಲ್ಲವೇ ಇಲ್ಲ. ರೋಗ ರುಜಿನಗಳು ಕಡಿಮೆ. ಅವರಿಗೆ ಇರುವ ಭಯವೆಂದರೆ ಮೂರು ಸುತ್ತ ಇರುವ ನೀರು ಮಾತ್ರ. ಸರ್ಕಾರ ಈ ಗ್ರಾಮಸ್ಥರನ್ನು ಈ

ಭಯದಿಂದ ರಕ್ಷಿಸುವತ್ತ ಗಮನ ಹರಿಸಬೇಕು. ದೃಢ ಕಾಯರು, ಪರಿಶ್ರಮಿಗಳು ಆದ ಬೆಂಗರೆಯ ಜನ ಬೇರೆಡೆಯ ಜನರಂತೆ ಸುಲಿಗೆಗೆ ಒಳಗಾದವರಲ್ಲ. ಇಲ್ಲಿನ ಆಟಗಾರರು, ಈಜುಗಾರರು, ಕುಸ್ತಿ ಪಟುಗಳು ಸುಪ್ರಸಿದ್ಧ. ಈ ಗ್ರಾಮ ದೇಶಕ್ಕೆ ಗೌರವದ ಸ್ವತ್ತು. ಇದನ್ನು ಇನ್ನೂ ಹೆಚ್ಚು ಎಚ್ಚರಿಕೆಯಿಂದ ಅಭಿವೃದ್ಧಿ ಗೊಳಿಸಬೇಕು. ಹೀಗೆ ಬೆಂಗರೆಯ ಜನರ ಉದ್ಯೋಗ, ಜೀವನ ವಿಧಾನವನ್ನು. ಹತ್ತಿರದಿಂದ ನೋಡಿದಾಗ ದೇಶದ ಯುವಕ ಯುವತಿಯರನ್ನು ಮೀನುಗಾರಿಕೆ ಯಲ್ಲಿ ತರಬೇತಿ ನೀಡಿ ತೊಡಗಿಸಿದರೆ ದೇಶದ ಬೃಹತ್ ಸಮಸ್ಯೆಯಾದ ನಿರುದ್ಯೋಗ ತಕ್ಕ ಮಟ್ಟಿಗೆ ಪರಿಹಾರ ಕಾಣಬಹುದು.

ಭೇಟಿಮಾಡಿದ ವ್ಯಕ್ತಿಗಳು

1) ನರಸಪ್ಪ ಸ್ವರ್ಣ
2) ಸಿಂಗೂರಿ ಕೋಟ
3) ಭಗವಾನ್ ದಾಸ್
4) ನಾರಾಯಣ್ ಸಾಲಿಯಾನ
5) ವಾಸ್ಮಿನ್
6) ತುಕ್ಕಳ ಕೆಂಚ
7) ಮಂಜುನಾಥ್
8) ಗೋಪಾಲ ಪುತ್ರನ್
9) ಶ್ರೀಮತಿ ಸುಮತಿ
10) ಪುರಂಧರ್
11) ಕು॥ ಸೀತಾ
12) ವೆಂಕಟಪ್ಪ ಮೋಯಿನ್ ದಾರಿ

13) ದಾಮೋದರ್
14) ರಾಮ ಕ್ರೋಡಿಯನ್
15) ಸತುಪಾಲ್ ಬೆಂಗರೆ
16) ಶಾಂತಾರಾಮ್ ಬೆಂಗರೆ
17) ಪುಂಡಲೀಕ
18) ದಿನೇಶ್
19) ಚಂದ್ರ ಬೆಂಗರೆ
20) ಜಯಚಂದ್ರ ಬೆಂಗರೆ
21) ರಾಮ್‌ದಾಸ್ ಸಾಲಿಯಾನ್
22) ನವೀನ್ ಕುಮಾರ್
23) ಗಂಗೈಯ್ಯ ಪುತ್ರನ್
24) ಸುರೇಂದ್ರ ಬೆಂಗರೆ
25) ರಮೇಶ್ ಬೆಂಗರೆ
26) ವಿಜಯ ಬೆಂಗೆರೆ
27) ಯಶ್‌ಪಾಲ್ ಬೆಂಗರೆ
28) ಸುಕಪಾಲ್ ಪುಟಿಯನ್
29) ಮೋಹನ್ ಬೆಂಗರೆ
30) ನರೇಂದ್ರ ಬೆಂಗರೆ
31) ಗೋಪಾಲಕೃಷ್ಣ ಬೆಂಗರೆ
32) ಲೋಕೇಶ್ ಅಮಿನ್
33) ದೇವದಾಸ್ ಬೆಂಗರೆ
34) ಜಗದೀಶ್ ಬೆಂಗರೆ
35) ಗೋಪಾಲಕೃಷ್ಣ ಕರ್ಕೆರ
36) ಲಕ್ಷ್ಮಣ್ ಕರ್ಕೆರ
37) ಜನಾರ್ಧನ ಪುಟಿಯಾನ್
38) ಆನಂದ್ ಬೆಂಗರೆ
39) ಪುಂಡಲೀಕ ಬೆಂಗರೆ

ಚರ್ಚೆ ನಡೆಸಿದ ಮತ್ತು ಭೇಟಿಮಾಡಿದ ಸಂಸ್ಥೆಗಳು

1) ಬೆಂಗರೆ ಹೈಯರ್ ಸೆಕೆಂಡರಿ ಶಾಲೆಯ ಅಧ್ಯಾಪಕ ವೃಂದದವರು
2) ಯೂತ್ ಕ್ಲಬ್ಬಿನ ಸದಸ್ಯರು
3) ವ್ಯಾಯಾಮ ಶಾಲೆಯ ಸದಸ್ಯರು
4) ಫುಟ್ ಬಾಲ್ ಕ್ಲಬ್ ಸದಸ್ಯರು
5) ಸ್ವಿಮಿಂಗ್ ಕ್ಲಬ್ ಸದಸ್ಯರು

— o —

ಪ್ರಚಾರೋಪನ್ಯಾಸ ಮಾಲೆ

1.	ನಗೆಯ ನೆಲೆ	ಎಸ್. ಕೆ. ರಾಮಚಂದ್ರರಾವ್
2.	ನಕ್ಷತ್ರ ಲೋಕ	ಜಿ. ಟಿ. ನಾರಾಯಣರಾವ್
3.	ಶಾಂತಿನಾಥ ಕವಿ	ಕಮಲ ಹಂಪನಾ
4.	ಶ್ರೀ ಕವಿ ಲಕ್ಷ್ಮೀಶ	ಜಿ. ಎಸ್. ಸಿದ್ಧಲಿಂಗಯ್ಯ
5.	ಉತ್ತಂಗಿ ಚನ್ನಪ್ಪ	ಸ. ಸ. ಮಾಳವಾಡ
6.	ಬಯಲಾಟಗಳು	ಚಂದ್ರಶೇಖರ ಕಂಬಾರ
7.	ನಾಟಕದಲ್ಲಿ ನವ್ಯತೆ	ಪಿ. ಲಂಕೇಶ್
8.	ದ್ರಾವಿಡ ಸಂಖ್ಯಾವಾಚಕಗಳು	ಹಂಪ. ನಾಗರಾಜಯ್ಯ
9.	ಎದೆ ರೋಗಗಳು	ಎಂ. ಬಸವರಾಜೆ ಅರಸು
10.	ಅರವಿಂದರ ವಿಚಾರಧಾರೆ	ಸಿ. ಕೆ. ವೆಂಕಟರಾಮಯ್ಯ
11.	ಪೂರ್ಣಯೋಗಿ ಶ್ರೀ ಅರವಿಂದರು	ಕೋ. ಚನ್ನಬಸಪ್ಪ
12.	ಪ್ರಾಚೀನ ಸಂಸ್ಕೃತಿ	ಎಸ್. ಕೆ. ರಾಮಚಂದ್ರರಾವ್
13.	ಪ್ರಾಚೀನ ಭಾರತದ ಆರ್ಥಿಕ ವ್ಯವಸ್ಥೆ	ಎನ್. ಜಿ. ಚಂದ್ರಶೇಖರಯ್ಯ
14.	ಸಣ್ಣ ಕೈಗಾರಿಕೆಗಳು	ಆರ್. ಎಸ್. ಆರಾಧ್ಯ
15.	ವಿವಾಹ ಪದ್ಧತಿಗಳು	ಎಸ್. ಕೆ. ರಾಮಚಂದ್ರರಾವ್
16.	ಪಾನೀಯಗಳು	ಕೆ. ಎಸ್. ಲಕ್ಷ್ಮಣರಾವ್
17.	ಚಂದ್ರಲೋಕ ಯಾತ್ರೆ	ಪಿ. ಎಸ್. ವೆಂಕಟಸ್ವಾಮಿಶೆಟ್ಟಿ
18.	ಬೆಳಕಿನ ಸ್ವರೂಪ	ಬಿ. ವಿ. ನಾರಾಯಣರಾವ್
19.	ದೂರದರ್ಶನ	ಕೆ. ಶೇಷಾದ್ರಿ ಅಯ್ಯಂಗಾರ್
20.	ಸೂಕ್ಷ್ಮದರ್ಶಕಗಳು ಮತ್ತು ದೂರದರ್ಶಕಗಳು	ಕೆ. ಶೇಷಾದ್ರಿ ಅಯ್ಯಂಗಾರ್
21.	ಕುರುಡು	ಎಸ್. ಟಿ. ಪುಟ್ಟಣ್ಣ
22.	ಕಣ್ಣಿನ ರೋಗಗಳು	ಎಸ್. ಟಿ. ಪುಟ್ಟಣ್ಣ
23.	ಕ್ಷಯ	ಎಂ. ಬಸವರಾಜೆ ಅರಸು
24.	ಭಯ : ಸರಳ ವಿಶ್ಲೇಷಣೆ	ಎಂ. ಶಿವರಾಂ
25.	ಉಕ್ಕು : ತಯಾರಿಕೆ ಮತ್ತು ರಚನೆ	ಕೆ. ಆರ್. ಮೋಹನ್
26.	ನೀರಾವರಿ ಸಮಸ್ಯೆಗಳು	ಕೆ. ಎನ್. ಶಿವಶಂಕರರಾವ್
27.	ಅಂತರ್ಜಲ	ಸಿ. ನಾಗಣ್ಣ
28.	ಪಂಪ	ತ. ಸು. ಶಾಮರಾಯ
29.	ದೇಹರಚನೆ ಹಾಗೂ ಮೂಳೆಗಳು	ಎಸ್. ಬಿ. ವಸಂತ ಕುಮಾರ್
30.	ಶ್ರೀನಿವಾಸ ರಾಮಾನುಜನ್	ಜಿ. ಟಿ. ನಾರಾಯಣರಾವ್
31.	ಮಹಾಕವಿ ಕುಮಾರನಾಶಾನ್	ಬಿ. ಕೆ. ತಿಮ್ಮಪ್ಪ, ಟಿ. ವೆಂಕಟಲಕ್ಷ್ಮಿ
32.	ತುಳ್ಳಲ್‌ಕವಿ ಕುಂಜನ್ ನಂಬಿಯಾರ್	ಬಿ. ಕೆ. ತಿಮ್ಮಪ್ಪ, ಟಿ. ವೆಂಕಟಲಕ್ಷ್ಮಿ
33.	ಪರಾಮಾನಸಶಾಸ್ತ್ರ	ಎಸ್. ಕೆ. ರಾಮಚಂದ್ರರಾವ್